ಕರ್ನಾಟಕ ಸರ್ಕಾರ

ಪರಿಸರ ಅಧ್ಯಯನ

ಅಭ್ಯಾಸಸಹಿತ ಪಠ್ಯಪುಸ್ತಕ

(ಪರಿಷ್ಕೃತ)

ಭಾಗ–2

ಕನ್ನಡ ಮಾಧ್ಯಮ

4

ನಾಲ್ಕನೆಯ ತರಗತಿ

@KTBS NOT TO BE REPUBLISHED

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
6ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು–03.

ಪರಿವಿಡಿ

R4J6Y6

ಕ್ರ.ಸಂ.	ಪಾಠ	ಪುಟ ಸಂಖ್ಯೆ
13.	ಅದ್ಭುತ ಯಂತ್ರ–ನಮ್ಮ ದೇಹ	1 – 11
14.	ಸಂಚಾರ ನಿಯಮಗಳು	12 – 20
15.	ಸಾರಿಗೆ ಮತ್ತು ಸಂಪರ್ಕ	21 – 30
16.	ಬದಲಾಗುತ್ತಿರುವ ಕುಟುಂಬಗಳು	31 – 39
17.	ಮನೆಯೇ ಮೊದಲ ಪಾಠಶಾಲೆ	40 – 45
18.	ಪ್ರತಿಯೊಬ್ಬರೂ ವಿಶಿಷ್ಟ	46 – 53
19.	ವೃತ್ತಿ ವಿಶೇಷ	54 – 59
20.	ಹಬ್ಬ–ಹರುಷ	60 – 67
21.	ಓ	68 – 79
22.	ಸೌಲಭ್ಯಗಳು–ಸುಧಾರಣೆ	80 – 85
23.	ಉಡುಪು–ವಿನ್ಯಾಸ	86 – 92
24.	ಮೋಡಣ್ಣನ ಪಯಣ	93 – 104
25.	ನಮ್ಮ ರಾಜ್ಯ–ನಮ್ಮ ಹೆಮ್ಮೆ	105 – 118

@KTBS NOT TO BE REPUBLISHED

ಪಾಠ – 13

ಅದ್ಭುತ ಯಂತ್ರ–ನಮ್ಮ ದೇಹ

Z9B2U9


ಈ ಪಾಠವನ್ನು ಕಲಿತ ನಂತರ ನೀನು,

- ದೇಹದಲ್ಲಿ ನಡೆಯುವ ಮುಖ್ಯ ಕ್ರಿಯೆಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಮುಖ್ಯ ಅಂಗಗಳ ಪರಿಚಯ ಮಾಡಿಕೊಳ್ಳುವೆ.
- ಸ್ವಚ್ಛತೆಯ ಅಭ್ಯಾಸದಿಂದ ಈ ಅಂಗಗಳ ಆರೋಗ್ಯ ಕಾಪಾಡಿಕೊಳ್ಳುವ ಅರಿವನ್ನು ಪಡೆಯುವೆ.
- ಉತ್ತಮ ಆರೋಗ್ಯದ ಅಭ್ಯಾಸಗಳನ್ನು ಅರಿಯುವೆ.

ಜ್ಞಾನೇಂದ್ರಿಯಗಳು ಹಾಗೂ ಅವುಗಳ ಕೆಲಸದ ಬಗ್ಗೆ ಹಿಂದಿನ ತರಗತಿಯಲ್ಲಿ ಕಲಿತಿರುವ ಅಂಶಗಳನ್ನು ನೆನಪಿಸಿಕೊ. ಕೆಳಗಿನ ಪಟ್ಟಿಯಲ್ಲಿ ಜ್ಞಾನೇಂದ್ರಿಯಗಳು ಹಾಗೂ ಅವುಗಳ ಕೆಲಸಗಳನ್ನು ಕೊಟ್ಟಿದೆ. ಗೆರೆ ಎಳೆದು ಹೊಂದಿಸು.

ಅ	ಆ
ಕಣ್ಣು	ವಾಸನೆ ಗ್ರಹಿಸುವುದು
ಕಿವಿ	ರುಚಿ ಸವಿಯುವುದು
ಮೂಗು	ವಸ್ತುಗಳನ್ನು ನೋಡುವುದು
ನಾಲಿಗೆ	ಬಿಸಿ, ತಂಪು ಇತ್ಯಾದಿ ಅನುಭವಗಳನ್ನು ಗ್ರಹಿಸುವುದು
ಚರ್ಮ	ಆಲಿಸುವುದು

ಈ ಅಂಗಗಳೆಲ್ಲವೂ ನಮಗೆ ಕಾಣುವಂತೆ ಇವೆ. ನಮ್ಮ ದೇಹದ ಒಳಗೂ ಹಲವು ಅಂಗಗಳಿವೆ. ಅವು ನಮಗೆ ಕಾಣುವುದಿಲ್ಲ. ಅವುಗಳ ಬಗ್ಗೆ ತಿಳಿಯೋಣ.



ನಿನ್ನ ಚರ್ಮವನ್ನು ನೋಡಿಕೊ. ಅದರ ಅಡಿಯಲ್ಲಿ ಮಾಂಸ ಖಂಡಗಳು ಹಾಗೂ ಮೂಳೆಗಳಿವೆ. ಇವು ನಿನಗೆ ಕಾಣುವುದಿಲ್ಲ. ಇವುಗಳ ಮೇಲೆ ಹೊದಿಕೆಯಂತಿರುವ ಚರ್ಮ ನಮ್ಮ ದೇಹಕ್ಕೆ ರಕ್ಷಣೆ ಕೊಡುತ್ತದೆ. ಮೂಳೆಗಳು ಮತ್ತು ಮಾಂಸಖಂಡಗಳು ಸೇರಿ ನಮ್ಮ ದೇಹಕ್ಕೆ ಆಕಾರ ಮತ್ತು ರೂಪವನ್ನು ಕೊಟ್ಟಿವೆ. ನಿನ್ನ ದೇಹದ ಆಕಾರ, ರೂಪಕ್ಕೂ ನಿನ್ನ ಗೆಳೆಯ/ಗೆಳತಿಯ ದೇಹದ ಆಕಾರ ಮತ್ತು ರೂಪಕ್ಕೂ ವ್ಯತ್ಯಾಸವಿದೆ. ಗಮನಿಸು.

@KTBS NOT TO BE REPUBLISHED

ನಮ್ಮ ದೇಹದಲ್ಲಿ ಹಲವಾರು ಕ್ರಿಯೆಗಳು ನಡೆಯುತ್ತಿರುತ್ತವೆ. ಉಸಿರಾಟ, ಜೀರ್ಣಕ್ರಿಯೆ, ರಕ್ತ ಪರಿಚಲನೆ ಹಾಗೂ ಕಶ್ಮಲಗಳ ವಿಸರ್ಜನೆ ಇತ್ಯಾದಿ ಕ್ರಿಯೆಗಳು ನಮ್ಮ ದೇಹವನ್ನು ಸದೃಢವಾಗಿಯೂ, ಆರೋಗ್ಯಕರವಾಗಿಯೂ ಇಟ್ಟುಕೊಂಡಿವೆ. ದೇಹದಲ್ಲಿರುವ ವಿವಿಧ ಅಂಗಗಳ ಬಗ್ಗೆ, ಅವುಗಳು ಭಾಗವಹಿಸುವ ಕ್ರಿಯೆಗಳ ಬಗ್ಗೆ ತಿಳಿದುಕೊ.


ಉಸಿರಾಟ

ಮಗೂ, ನೀನು ಗಾಳಿಯನ್ನು ಮೂಗಿನ ಮೂಲಕ ದೇಹದ ಒಳಗೆ ತೆಗೆದುಕೊಳ್ಳುವೆ ಎಂಬುದನ್ನು ತಿಳಿದಿರುವೆ.

ಮಾಡಿ – ನೋಡು

ನಿನ್ನ ಕೈಯನ್ನು ಎದೆಯ ಮೇಲೆ ಇಟ್ಟುಕೊ. ಮೂಗಿನ ಮೂಲಕ ಗಾಳಿಯನ್ನು ನಿಧಾನವಾಗಿ ಒಳಗೆ ತೆಗೆದುಕೊ. ಹಾಗೆಯೇ ನಿಧಾನವಾಗಿ ಗಾಳಿಯನ್ನು ಹೊರಗೆ ಬಿಡು. ಎದೆಯ ಮೇಲಿರುವ ಕೈಗೆ ಎಂತಹ ಅನುಭವ ಆಯಿತು?

ಚಿತ್ರವನ್ನು ನೋಡು. ಗಾಳಿಯು ಮೂಗು, ಶ್ವಾಸನಾಳ ಮತ್ತು ಶ್ವಾಸಕೋಶಗಳಿಗೆ ಹೋಗಿ ಮತ್ತೆ ಅದೇ ದಾರಿಯು ಮೂಲಕ ಹೊರಬರುತ್ತದೆ. ಹಾಗಾಗಿ ಎದೆಯ ಮೇಲಿರುವ ಕೈಗೆ ಏರಿಳಿತದ ಅನುಭವವಾಗುತ್ತದೆ. ಚಿತ್ರದಲ್ಲಿ ಗಾಳಿ ಒಳಗೆ–ಹೊರಗೆ ಹೋಗುವ ದಾರಿಯನ್ನು ಹಾಗೂ ಅಂಗಗಳನ್ನು ತೋರಿಸಿದೆ.
ಅವುಗಳನ್ನು ಕ್ರಮವಾಗಿ ಬರೆ.



1. _____

2. _____

3. _____

ಗಾಳಿಯಲ್ಲಿರುವ **ಆಕ್ಸಿಜನ್** ಎಂಬ ಅನಿಲ ನಮ್ಮ ದೇಹಕ್ಕೆ ಬೇಕು. ಉಸಿರಾಟದ ಮೂಲಕ ತೆಗೆದುಕೊಂಡ ಗಾಳಿಯಲ್ಲಿರುವ ಆಕ್ಸಿಜನ್ ಶ್ವಾಸಕೋಶಗಳಿಂದ ರಕ್ತಕ್ಕೆ ಸೇರುತ್ತದೆ. ಶ್ವಾಸಕೋಶಗಳಲ್ಲಿ ಸಂಗ್ರಹವಾಗಿರುವ ನಮ್ಮ ದೇಹಕ್ಕೆ ಬೇಡವಾದ **ಕಾರ್ಬನ್ ಡೈಆಕ್ಸೈಡ್** ಎಂಬ ಅನಿಲ ಗಾಳಿಯಲ್ಲಿ ಸೇರಿ, ಶ್ವಾಸನಾಳ ಹಾಗೂ ಮೂಗಿನ ಮೂಲಕ ದೇಹದಿಂದ ಹೊರಹೋಗುತ್ತದೆ.

ಹೀಗೆ ಆಕ್ಸಿಜನ್‌ಅನ್ನು ಒಳಗೆ ತೆಗೆದುಕೊಂಡು ಕಾರ್ಬನ್ ಡೈಆಕ್ಸೈಡ್‌ಅನ್ನು ಹೊರಬಿಡುವ ಕ್ರಿಯೆಗೆ **ಉಸಿರಾಟ** ಎನ್ನುವರು.

© KTBS NOT TO BE REPUBLISHED

ಮಾಡಿ–ನೋಡು

ಒಂದು ನಿಮಿಷಕ್ಕೆ ಎಷ್ಟು ಬಾರಿ ಉಸಿರಾಡುವೆ? ಎಣಿಸು.


ಉಸಿರಾಟ ಕ್ರಿಯೆಗೆ ತೊಂದರೆಯಾಗದಂತೆ ಆರೋಗ್ಯಕರ ಅಭ್ಯಾಸಗಳನ್ನು ಬೆಳೆಸಿಕೊ. ಕೆಲವನ್ನು ಇಲ್ಲಿ ಕೊಟ್ಟಿದೆ.



ಓದಿ–ತಿಳಿ

- ಸ್ನಾನ ಮಾಡುವಾಗ ಮೂಗನ್ನು ಸ್ವಚ್ಛಗೊಳಿಸು.
- ಮಲಗಿದಾಗ ಮುಸುಕು ಹಾಕಿ ಮಲಗಬೇಡ.
- ಧೂಳು ಹೆಚ್ಚಾಗಿರುವ ಪ್ರದೇಶದಲ್ಲಿ ಸಂಚರಿಸುವಾಗ ಮೂಗಿಗೆ ಧೂಳು ಸೇರದಂತೆ ಎಚ್ಚರಿಕೆ ವಹಿಸು.
- ಅವಸರವಾಗಿ ಊಟ ಮಾಡುವುದಾಗಲಿ, ನೀರು ಕುಡಿಯುವುದಾಗಲಿ ಮಾಡಬೇಡ.
- ದಟ್ಟ ಹೊಗೆ ಇರುವ ಕಡೆ ಹೋಗಬೇಡ. ದಟ್ಟ ಹೊಗೆಯನ್ನು ಉಸಿರಾಡಿದರೆ ಶ್ವಾಸಕೋಶಕ್ಕೆ ಸಂಬಂಧಿಸಿದ ತೊಂದರೆಗಳು ಬರುತ್ತವೆ.
- ದಿನಕ್ಕೆ ಒಂದು ಸಲವಾದರೂ ನೇರವಾಗಿ ಕುಳಿತು ಹತ್ತು ಸಲ ಆಳವಾಗಿ ಉಸಿರಾಡುವುದನ್ನು ಅಭ್ಯಾಸ ಮಾಡು.
- ಮೂಗಿಗೆ ಕಡ್ಡಿ, ಪೆನ್ನು, ಬಳಪದಂತಹ ಯಾವುದೇ ವಸ್ತುಗಳನ್ನು ಹಾಕಬೇಡ.
- ಬಾಯಿಯ ಮೂಲಕ ಉಸಿರಾಡಬೇಡ.
- ಕೆಮ್ಮುವಾಗ ಅಥವಾ ಸೀನುವಾಗ ಕರವಸ್ತ್ರವನ್ನು ಬಾಯಿಗೆ ಅಡ್ಡವಾಗಿ ಹಿಡಿ. ನಿನಗೆ ನೆಗಡಿ, ಕೆಮ್ಮು ಇದ್ದಲ್ಲಿ ಬಾಯಿಯ ಮೂಲಕ ಕ್ರಿಮಿಗಳು ಗಾಳಿಯನ್ನು ಸೇರದಂತೆ ತಡೆಯಬಹುದು. ಇದರಿಂದ ಕೆಮ್ಮು ಅಥವಾ ನೆಗಡಿ ಇತರರಿಗೆ ಹರಡುವುದನ್ನು ತಪ್ಪಿಸಬಹುದು.

ರಕ್ತ ಪರಿಚಲನೆ



ಈ ಚಿತ್ರವನ್ನು ಗಮನಿಸು. ಇದರ ಹೆಸರನ್ನು ಇಲ್ಲಿ ಬರೆ.

ದೇಹದ ಯಾವುದೇ ಭಾಗದಲ್ಲಿ ಗಾಯವಾದಾಗ ರಕ್ತ ಬರುವುದನ್ನು ನೀನು ನೋಡಿರುವೆ. ರಕ್ತದ ಬಣ್ಣವೇನು? ಇಲ್ಲಿ ಬರೆ.

© KTBS NOT TO BE REPUBLISHED

ದೇಹದ ಎಲ್ಲ ಭಾಗಗಳಲ್ಲಿ ರಕ್ತ ಹರಿಯುತ್ತಿರುತ್ತದೆ ಎಂದು ನಿನಗೆ ಗೊತ್ತೆ? ದೇಹದ ಎಲ್ಲ ಭಾಗಗಳಿಗೆ ರಕ್ತವನ್ನು ಹರಿಸುವ ಮುಖ್ಯ ಅಂಗವೇ ಹೃದಯ.

ಮಾಡಿ–ನೋಡು

ನಿನ್ನ ಎಡಗೈ ಬೆರಳುಗಳನ್ನು ಮಡಚಿ ಮುಷ್ಟಿ ಕಟ್ಟು. ನಿನ್ನ ಎಡಗೈ ಮುಷ್ಟಿಯಷ್ಟೆ ನಿನ್ನ ಹೃದಯದ ಗಾತ್ರವಿದೆ.



ಶ್ವಾಸಕೋಶಗಳ ಬಗ್ಗೆ ನೀನಾಗಲೇ ತಿಳಿದಿರುವೆ. ಅವುಗಳ ನಡುವೆ ಸ್ವಲ್ಪ ಎಡಭಾಗದಲ್ಲಿ ಹೃದಯ ಇದೆ. ಎದೆಯ ಗೂಡಿನಿಂದ ಇದು ರಕ್ಷಿಸಲ್ಪಟ್ಟಿದೆ.

ಬಾವಿಯ ನೀರನ್ನು ಪಂಪಿನ ಸಹಾಯದಿಂದ ಎತ್ತರದ ಕೊಳವೆಗಳ ಮೂಲಕ ಹರಿಸುವುದನ್ನು ನೀನು ನೋಡಿದ್ದೀಯಲ್ಲವೆ? ಹೃದಯವೂ ಪಂಪ್‌ನಂತೆ ಕೆಲಸ ಮಾಡಿ ರಕ್ತವನ್ನು ರಕ್ತನಾಳಗಳ ಮೂಲಕ ದೇಹದ ಎಲ್ಲ ಭಾಗಗಳಿಗೂ ತಲುಪಿಸುತ್ತದೆ.

ಮಾಡಿ–ನೋಡು

ನಿನ್ನ ಸ್ನೇಹಿತರ ಎದೆಯ ಮೇಲೆ ಕೈಯಿಡು. ಹೃದಯದ ಲಬ್ ಡಬ್ ಅನುಭವವನ್ನು ಪಡೆ. ಹೃದಯವು ರಕ್ತವನ್ನು ಪಂಪ್ ಮಾಡುವಾಗ ಲಬ್ ಡಬ್ ಬಡಿತದ ಅನುಭವವಾಗುತ್ತದೆ.


ನಮ್ಮ ದೇಹದಲ್ಲಿ ರಕ್ತವು ಎಲ್ಲಾ ಭಾಗಗಳಲ್ಲಿ ಹರಿಯುತ್ತದೆ. ಇದು ದೇಹದ ಭಾಗಗಳಿಂದ ಕಾರ್ಬನ್ ಡೈಆಕ್ಸೈಡ್‌ಅನ್ನು ಪಡೆದು ಅಶುದ್ಧಗೊಳ್ಳುತ್ತದೆ. ಹೀಗೆ ಅಶುದ್ಧವಾದ ರಕ್ತವು ರಕ್ತನಾಳಗಳ ಮೂಲಕ ಹೃದಯವನ್ನು ಸೇರುತ್ತದೆ.

ಹೃದಯದಿಂದ ರಕ್ತವು ಶ್ವಾಸಕೋಶಗಳನ್ನು ತಲುಪುತ್ತದೆ. ಅಲ್ಲಿ ಅದು ಕಾರ್ಬನ್ ಡೈ ಆಕ್ಸೈಡ್‌ಅನ್ನು ಬಿಟ್ಟು ಆಕ್ಸಿಜನ್‌ಅನ್ನು ಪಡೆದು ಶುದ್ಧವಾಗುತ್ತದೆ. ಶುದ್ಧ ರಕ್ತವು ರಕ್ತನಾಳಗಳ ಮೂಲಕ ಮತ್ತೆ ಹೃದಯವನ್ನು ತಲುಪುತ್ತದೆ. ಹೃದಯದಿಂದ ಆಕ್ಸಿಜನ್ ಇರುವ ಶುದ್ಧ ರಕ್ತವು ರಕ್ತನಾಳಗಳ ಮೂಲಕ ದೇಹದ ಎಲ್ಲ ಭಾಗಗಳಿಗೆ ತಲುಪುತ್ತದೆ. ಇದೇ ರಕ್ತ ಪರಿಚಲನೆ.

ವೈದ್ಯರು ಹೃದಯದ ಬಡಿತವನ್ನು ಹೇಗೆ ಪರೀಕ್ಷಿಸುತ್ತಾರೆ? ನೀನು ನೋಡಿರುವೆಯಾ?


@KTBS NOT TO BE REPUBLISHED

ವೈದ್ಯರು ಹೃದಯ ಬಡಿತವನ್ನು ತಿಳಿಯಲು ಬಳಸುವ ಉಪಕರಣದ ಚಿತ್ರ ಇಲ್ಲಿ ಇದೆ. ಇದರ ಹೆಸರನ್ನು ಬರೆ.



ಮಾಡಿ–ನೋಡು

ಮೂರು ಪ್ಲಾಸ್ಟಿಕ್ ನಾಳಗಳು, ಒಂದು ಟಿ (T) ಆಕಾರದ ನಾಳ, ಆಲಿಕೆ, ಪ್ಲಾಸ್ಟಿಕ್ ಹಾಳೆ ಮತ್ತು ರಬ್ಬರ್ ಬ್ಯಾಂಡ್‌ಗಳನ್ನು ಚಿತ್ರದಲ್ಲಿ ತೋರಿಸಿದಂತೆ ಜೋಡಿಸು. ಈಗ ಸ್ಟೆತೋಸ್ಕೋಪ್ ತಯಾರು.



@KTBS NOT TO BE REPUBLISHED


ಸ್ಟೆತೋಸ್ಕೋಪ್‌ನ ಆಲಿಕೆಯನ್ನು ನಿನ್ನ ಸ್ನೇಹಿತನ ಎದೆಯ ಮೇಲಿಡು. ನಿನ್ನ ಕಿವಿಗಳಲ್ಲಿ ಎರಡು ಕೊಳವೆಗಳನ್ನು ಇಟ್ಟುಕೊಂಡು ಹೃದಯ ಬಡಿತವನ್ನು ಎಣಿಸು.

ಒಂದು ನಿಮಿಷಕ್ಕೆ ಹೃದಯವು ಎಷ್ಟು ಸಲ ಬಡಿಯುತ್ತದೆ? ನಿನ್ನ ಕೈಯನ್ನು ಎದೆಯ ಮೇಲಿಟ್ಟು ಬಡಿತವನ್ನು ಎಣಿಸು.

ನಿನ್ನ ದೇಹದಲ್ಲಿ ರಕ್ತ ಪರಿಚಲನೆ ಸರಿಯಾಗಿ ನಡೆಯಲು ತರಕಾರಿ ಮತ್ತು ಹಣ್ಣುಗಳನ್ನು ನಿಯಮಿತವಾಗಿ ಸೇವಿಸು. ಪ್ರತಿದಿನ ವ್ಯಾಯಾಮ ಮಾಡುವುದನ್ನು ರೂಢಿಸಿಕೊ.

ಜೀರ್ಣಕ್ರಿಯೆ

ಪ್ರತಿದಿನ ನೀನು ಊಟ ಮಾಡುವೆಯಲ್ಲವೆ? ಅದು ದೇಹದ ಯಾವ ಭಾಗಕ್ಕೆ ಹೋಗುತ್ತದೆ? ಏನಾಗುತ್ತದೆ, ನಿನಗೆ ಗೊತ್ತೆ?



ಪಕ್ಕದ ಚಿತ್ರವನ್ನು ಗಮನಿಸು. ನೀನು ಸೇವಿಸಿದ ಆಹಾರ ಬಾಯಿಯ ಮೂಲಕ ಅಂಗದಿಂದ ಅಂಗಕ್ಕೆ ಸಾಗುತ್ತದೆ. ಈ ಅಂಗಗಳು ಯಾವುದೆಂದು ಚಿತ್ರ ನೋಡಿ ಇಲ್ಲಿ ಬರೆ.

1.

2.

3.

4.

5.

6.

7.

@KTBS
NOT TO BE REPUBLISHED

ಅಂಗಗಳ ಹೆಸರು ಬರೆದೆಯಲ್ಲವೆ? ನಿನ್ನ ಬಾಯಿಯ ಭಾಗಗಳನ್ನು ಹೆಸರಿಸು.

_____

ಆಹಾರವನ್ನು ಅಗಿಯಲು ಬಾಯಿಯ ಯಾವ ಭಾಗ ಸಹಾಯ ಮಾಡುತ್ತದೆ?

_____

ನಾಲಿಗೆಯ ಕೆಲಸವೇನು?

_____



ಬಾಯಿಯ ಮೂಲಕ
ನೀನು ಸೇವಿಸಿದ ಆಹಾರವನ್ನು ಹಲ್ಲುಗಳು
ಅಗಿದು ಸಣ್ಣ ಕಣಗಳನ್ನಾಗಿ ಮಾಡುತ್ತವೆ.


ಮೆತ್ತಗಾದ ಆಹಾರ ಅನ್ನನಾಳದ ಮೂಲಕ ಜಠರವನ್ನು ಸೇರುತ್ತದೆ.






ಆಹಾರವು ಜಠರದಲ್ಲಿ ಬಹಳಷ್ಟು ಜೀರ್ಣವಾಗುತ್ತದೆ. ಆಹಾರವು ಜಠರದಲ್ಲಿ ಸುಮಾರು ಮೂರು ಗಂಟೆಗಳವರೆಗೂ ಇರುತ್ತದೆ.

ಈ ಆಹಾರವು ನಂತರ ಸಣ್ಣ ಕರುಳಿಗೆ ಹೋಗಿ ಇನ್ನಷ್ಟು ಜೀರ್ಣವಾಗುತ್ತದೆ. ಜೀರ್ಣವಾದ ಆಹಾರವು ಸಣ್ಣ ಕರುಳಿನ ಮೂಲಕ ರಕ್ತದಲ್ಲಿ ಸೇರಿ, ದೇಹದ ಎಲ್ಲ ಭಾಗಗಳಿಗೆ ತಲುಪುತ್ತದೆ.





ಜೀರ್ಣವಾಗದ ಆಹಾರ ದೊಡ್ಡ ಕರುಳನ್ನು ಸೇರಿ ಮಲದ ರೂಪದಲ್ಲಿ ಮಲದ್ವಾರದ ಮೂಲಕ ಹೊರಹೋಗುತ್ತದೆ.

ಆಹಾರವು ಜೀರ್ಣವಾಗಿ ರಕ್ತವನ್ನು ಸೇರುವ ಕ್ರಿಯೆಗೆ **ಜೀರ್ಣಕ್ರಿಯೆ** ಎನ್ನುವರು.

@KTBS NOT TO BE REPUBLISHED

ಆಟ–ಆಡು

ಜೀರ್ಣಕ್ರಿಯೆಯಲ್ಲಿ ಭಾಗವಹಿಸುವ ಅಂಗಗಳ ಹೆಸರು ಬರೆದು ಡಬ್ಬಿಯಲ್ಲಿ ಹಾಕು. ಗೆಳೆಯ–ಗೆಳತಿಯರಿಗೆ ಡಬ್ಬಿಯಿಂದ ಒಂದೊಂದು ಚೀಟಿ ತೆಗೆದುಕೊಳ್ಳಲು ಹೇಳು. ಅದರಲ್ಲಿ ಬರೆದಿರುವ ಅಂಗದ ಒಂದು ಕಾರ್ಯವನ್ನು ಹೇಳಲು ತಿಳಿಸು. ಆಟವನ್ನು ಪುನರಾವರ್ತಿಸು. ಅಗತ್ಯವಿದ್ದಲ್ಲಿ ಶಿಕ್ಷಕರ ನೆರವನ್ನು ಪಡೆ.



ಓದಿ–ತಿಳಿ

ಉತ್ತಮ ಆಹಾರಾಭ್ಯಾಸಗಳು

- ಊಟ ಮಾಡುವ ಮುನ್ನ ಮತ್ತು ನಂತರ ಕೈ–ಕಾಲುಗಳನ್ನು ತೊಳೆ.
- ಹುರುಳಿಕಾಯಿ, ಮೂಲಂಗಿ ಇತ್ಯಾದಿ ನಾರು ಪದಾರ್ಥಗಳಿರುವ ಆಹಾರ ಸೇವಿಸು.
- ಶುದ್ಧವಾದ ಹಾಗೂ ಆರೋಗ್ಯಕರವಾದ ಆಹಾರವನ್ನು ಸೇವಿಸು.
- ಆಹಾರ ಸೇವನೆಯ ನಂತರ ಪ್ರತಿ ಬಾರಿ ಬಾಯಿ, ಹಲ್ಲುಗಳು ಹಾಗೂ ನಾಲಿಗೆಯನ್ನು ಸ್ವಚ್ಛಗೊಳಿಸಿಕೊ.
- ಆಹಾರವನ್ನು ನಿಧಾನವಾಗಿ ಚೆನ್ನಾಗಿ ಅಗಿದು ಸೇವಿಸು.
- ಒಂದು ಆಹಾರ ಸೇವನೆಯಿಂದ ಮತ್ತೊಂದು ಆಹಾರ ಸೇವನೆಯ ನಡುವೆ ಮೂರರಿಂದ ನಾಲ್ಕು ಗಂಟೆಯ ಅಂತರವಿದ್ದರೆ ಉತ್ತಮ.


ಈ ಚಿತ್ರದಲ್ಲಿ ಸೂಚಿಸಿರುವ ಅಂಗದ ಕೆಲಸವನ್ನು ಅದರ ಮುಂದೆ ತೋರಿಸಿದ ಸ್ಥಳದಲ್ಲಿ ಬರೆ.






© KTBS NOT TO BE REPUBLISHED








@KTBS
NOT TO BE REPUBLISHED

ವಿಸರ್ಜನಾ ಕ್ರಿಯೆ

ಮನೆಯಲ್ಲಿ ನಡೆಯುವ ಚಟುವಟಿಕೆಗಳಿಂದ ಕಸವು ಉತ್ಪತ್ತಿಯಾಗುತ್ತದೆ. ಈ ಕಸವನ್ನು ನಾವು ದಿನವೂ ಹೊರಗೆ ಹಾಕುತ್ತೇವೆ. ಅದೇ ರೀತಿ ನಮ್ಮ ದೇಹಕ್ಕೆ ಬೇಡವಾದ ಹಲವು ವಸ್ತುಗಳು ಜೀರ್ಣಕ್ರಿಯೆ ಮುಂತಾದ ಕ್ರಿಯೆಗಳಿಂದ ದೇಹದ ನಾನಾ ಭಾಗಗಳಲ್ಲಿ ಉತ್ಪತ್ತಿಯಾಗುತ್ತವೆ. ಅವೇ ಕಶ್ಮಲಗಳು.

ದೇಹದಲ್ಲಿ ಉಂಟಾಗುವ ಕಶ್ಮಲಗಳು ದೇಹದಲ್ಲಿಯೇ ಉಳಿದುಬಿಟ್ಟರೆ ನಮ್ಮ ದೇಹವು ಹಲವು ರೋಗಗಳಿಗೆ ತುತ್ತಾಗಬಹುದು. ಹೀಗಾಗಿ ತನ್ನಲ್ಲಿ ಉತ್ಪತ್ತಿಯಾಗುವ ಕಶ್ಮಲಗಳನ್ನು ದೇಹವು ಚರ್ಮ, ಶ್ವಾಸಕೋಶಗಳು ಮತ್ತು ಮೂತ್ರ ಪಿಂಡಗಳ ಮೂಲಕ ಹೊರಹಾಕುತ್ತದೆ. ಮೂತ್ರ ಪಿಂಡಗಳು ನಮ್ಮ ದೇಹದ ಮುಖ್ಯ ವಿಸರ್ಜನಾಂಗಗಳಾಗಿವೆ.

ಮೂತ್ರದ ಮೂಲಕ ದೇಹವು ಕಶ್ಮಲಗಳನ್ನು ಹೊರಹಾಕಲು ಸಹಾಯ ಮಾಡುವ ವಿಸರ್ಜನಾಂಗಗಳ ಬಗ್ಗೆ ತಿಳಿಯೋಣ.



ಮೇಲಿನ ಚಿತ್ರವನ್ನು ಗಮನಿಸು. ಇದರ ಭಾಗಗಳನ್ನು ಇಲ್ಲಿ ಬರೆ.

1) _____

2) _____

3) _____

4) _____

ಕಿಬ್ಬೊಟ್ಟೆಯ ಒಳಗಡೆ, ಬೆನ್ನು ಮೂಳೆಯ ಎರಡೂ ಪಕ್ಕಗಳಲ್ಲಿ ಒಂದು ಜೊತೆ ಮೂತ್ರ ಪಿಂಡಗಳಿವೆ. ಇವು ರಕ್ತವನ್ನು ಸೋಸಿ, ದೇಹಕ್ಕೆ ಬೇಡವಾದ ವಸ್ತುಗಳನ್ನು ನೀರಿನೊಡನೆ ಹೊರಹಾಕುತ್ತವೆ. ಇದೇ ಮೂತ್ರ. ಈ ಮೂತ್ರವು ಮೂತ್ರ ನಾಳದ ಮೂಲಕ ಮೂತ್ರ ಕೋಶವನ್ನು ಸೇರುತ್ತದೆ. ನಂತರ ಮೂತ್ರ ದ್ವಾರದ ಮೂಲಕ ದೇಹದಿಂದ ಹೊರಹೋಗುತ್ತದೆ.

ಈ ಪ್ರಶ್ನೆಗಳಿಗೆ ಉತ್ತರ ಬರೆ.

ದೇಹದಿಂದ ಕಾರ್ಬನ್ ಡೈಆಕ್ಸೈಡ್‌ಅನ್ನು ಹೊರಹಾಕುವ ಅಂಗ ಯಾವುದು?

_____

ಕಶ್ಮಲಗಳನ್ನು ಬೆವರಿನ ರೂಪದಲ್ಲಿ ಹೊರಹಾಕುವ ಅಂಗ ಯಾವುದು?

_____

ಕಶ್ಮಲಗಳನ್ನು ಮೂತ್ರವಾಗಿ ಹೊರಹಾಕುವ ಅಂಗ ಯಾವುದು?

_____

@KTBS NOT TO BE REPUBLISHED



ಓದಿ–ತಿಳಿ

- ನಿಯಮಿತವಾಗಿ ಮೂತ್ರವನ್ನು ವಿಸರ್ಜಿಸು.
- ಪ್ರತಿದಿನ ಸ್ನಾನ ಮಾಡಿ, ಸ್ವಚ್ಛವಾದ ಉಡುಪುಗಳನ್ನು ಧರಿಸು.
- ಆಗಾಗ್ಗೆ ಕೈ-ಕಾಲು ಮುಖ ತೊಳೆ. ಹೀಗೆ ಮಾಡುವುದರಿಂದ ಬೆವರಿನ ಮೂಲಕ ಹೊರಬಂದು, ಸಂಗ್ರಹ ಆಗಿರುವ ಕಶ್ಮಲಗಳು ತೊಳೆದು ಹೋಗುತ್ತವೆ. ಚರ್ಮವು ಸ್ವಚ್ಛವಾಗಿ ಬೆವರು ರಂಧ್ರಗಳು ಚೆನ್ನಾಗಿ ತೆರೆದುಕೊಳ್ಳುತ್ತವೆ.
- ದಿನಕ್ಕೆ 2 ಲೀಟರ್‌ಗಳಷ್ಟು ನೀರು ಕುಡಿ. ಇದರಿಂದ ಬೆವರು ಮತ್ತು ಮೂತ್ರದ ಮೂಲಕ ಕಶ್ಮಲಗಳು ದೇಹದಿಂದ ಹೊರಹೋಗುತ್ತವೆ.

ಉಸಿರಾಟ, ರಕ್ತಪರಿಚಲನೆ, ಜೀರ್ಣಕ್ರಿಯೆ ಮತ್ತು ವಿಸರ್ಜನೆ ಕೆಲಸಗಳನ್ನು ಮಾಡುವ ನಮ್ಮ ದೇಹ ಅದ್ಭುತ ಯಂತ್ರದಂತಿದೆ ಎಂದು ತಿಳಿದೆಯಲ್ಲವೆ. ನಿನ್ನ ದೇಹ ಸರಿಯಾಗಿ ಕೆಲಸ ಮಾಡಬೇಕಾದರೆ ಏನು ಮಾಡಬೇಕೆಂದು ಓದಿ ತಿಳಿ.



ಓದಿ–ತಿಳಿ

- ನಿಗದಿತ ಸಮಯದಲ್ಲಿ ಆಹಾರ ಸೇವನೆ, ಮಲ-ಮೂತ್ರ ವಿಸರ್ಜನೆ ಮಾಡುವ ಅಭ್ಯಾಸ ಮಾಡಿಕೊ.
- ಪ್ರತಿದಿನ ಆಟ ಆಡು, ವ್ಯಾಯಾಮ ಮಾಡು, ಸಾಕಷ್ಟು ನಡೆಯುವ ಅಭ್ಯಾಸ ಮಾಡಿಕೊ.
- ಆಹಾರವನ್ನು ಹಿತಮಿತವಾಗಿ ಸೇವಿಸು. ಕರಿದ ಪದಾರ್ಥಗಳನ್ನು, ಸಿಹಿತಿಂಡಿಗಳನ್ನು ಅತಿಯಾಗಿ ತಿನ್ನಬೇಡ.
- ಪ್ರತಿ ದಿನ ಸ್ನಾನ ಮಾಡಿ ದೇಹವನ್ನು ಸ್ವಚ್ಛವಾಗಿಟ್ಟುಕೊ. ಪ್ರತಿದಿನ ಒಗೆದ ಶುಭ್ರ ಉಡುಪುಗಳನ್ನು ಧರಿಸು.

ನಿನಗಿದು ಗೊತ್ತೆ?

- ನಮ್ಮ ದೇಹದಲ್ಲಿ 206 ಮೂಳೆಗಳಿವೆ. 600ಕ್ಕೂ ಹೆಚ್ಚಿನ ಕೀಲುಗಳಿವೆ.
- ನಿನ್ನ ದೇಹದಲ್ಲಿರುವ ಸಣ್ಣ ಕರುಳು 21 ಅಡಿ ಉದ್ದವಿರುತ್ತವೆ. ಅದು ಸುರುಳಿಯಾಗಿ ಸುತ್ತಿಕೊಂಡಿರುತ್ತದೆ.
- ನಮ್ಮ ಹೃದಯ ನಿಮಿಷಕ್ಕೆ ಎಪ್ಪತ್ತು ಸಲ ಬಡಿಯುತ್ತದೆ. ದಿನಕ್ಕೆ ಒಂದು ಲಕ್ಷ ಸಲ ಬಡಿದುಕೊಳ್ಳುತ್ತದೆ.
- ಶ್ವಾಸಕೋಶಗಳಲ್ಲಿ ಸುಮಾರು 3 ಲೀಟರ್‌ಗಳಷ್ಟು ಗಾಳಿ ತುಂಬಬಹುದು.
- ಮಾನವನ ದೇಹದಲ್ಲಿ ಸುಮಾರು 5.5 ಲೀಟರ್‌ಗಳಷ್ಟು ರಕ್ತವಿರುತ್ತದೆ.
- ಒಮ್ಮೆ ರಕ್ತದಾನ ಮಾಡಿದ ನಂತರ ರಕ್ತ ಮತ್ತೆ ದೇಹದಲ್ಲಿ ಉತ್ಪತ್ತಿಯಾಗುತ್ತದೆ. ಇದಕ್ಕೆ 4 ರಿಂದ 5 ವಾರಗಳು ಬೇಕು.

©KTBS NOT TO BE REPUBLISHED



ಪಾಠ – 14

ಸಂಚಾರ ನಿಯಮಗಳು


M8I3D1

ಈ ಪಾಠವನ್ನು ಕಲಿತ ನಂತರ ನೀನು,

- ಸಂಚಾರ ಸಂಕೇತಗಳು, ಸುರಕ್ಷತೆಯ ನಿಯಮಗಳು ಮತ್ತು ಅವುಗಳನ್ನು ಅನುಸರಿಸುವ ಅವಶ್ಯಕತೆಯನ್ನು ತಿಳಿಯುವೆ.

ನೀನು ರಸ್ತೆಯಲ್ಲಿ ನಡೆಯುವಾಗ ಅಥವಾ ವಾಹನಗಳಲ್ಲಿ ಹೋಗುವಾಗ ರಸ್ತೆಯ ಬದಿಯಲ್ಲಿ ಹಲವು ಫಲಕಗಳನ್ನು ನೋಡಿರುವೆ. ಅವುಗಳನ್ನು ಏಕೆ ಹಾಕಿರುತ್ತಾರೆ ಎಂಬುದು ನಿನಗೆ ತಿಳಿದಿದೆಯೆ? ಕೆಳಗಿನ ಚಿತ್ರ–ಕಥೆಯನ್ನು ಓದು.

ಸವಿತಾ, ಫಾತಿಮಾ, ನೀರಜ್, ಮೇರಿ ಮತ್ತು ಅವರ ಶಿಕ್ಷಕರು ನಗರದ ಪಾದಚಾರಿ ರಸ್ತೆಯಲ್ಲಿ ನಿಂತಿದ್ದಾರೆ. ಸಂಚಾರ ಪೊಲೀಸ್, ವಾಹನಗಳ ಸಂಚಾರದ ನಿಯಂತ್ರಣ ಮಾಡುತ್ತಿದ್ದಾರೆ.




© KTBS NOT TO BE REPUBLISHED


ಅಷ್ಟರಲ್ಲಿ ಇನ್ನೊಬ್ಬ ಸಂಚಾರ ಪೊಲೀಸ್ ಅವರ ಹತ್ತಿರ ಬಂದರು. ಶಿಕ್ಷಕರು ಅವರ ಪರಿಚಯ ಮಾಡಿಕೊಂಡರು.



NOT TO BE REPUBLISHED


ಅಷ್ಟರಲ್ಲಿ ನೀರಜ್ ಸಂಕೇತ ದೀಪವನ್ನು ನೋಡಿದ.





@KTBS NOT TO BE REPUBLISHED

ಅಷ್ಟರಲ್ಲಿ ಸಂಕೇತ ದೀಪದಲ್ಲಿ ಕೆಂಪು ದೀಪ ಹತ್ತಿತು. ಶಿಕ್ಷಕರು ಮತ್ತು ಮಕ್ಕಳು ದಾಟಬೇಕಾದ ರಸ್ತೆಯ ವಾಹನಗಳು ನಿಂತವು.



ಎಲ್ಲರೂ ಝೀಬ್ರಾ ಪಟ್ಟಿಯ ಮೂಲಕ ರಸ್ತೆಯನ್ನು ದಾಟಿದರು.



ಸಂಚಾರ ನಿಯಮ ತಿಳಿದು ಮಕ್ಕಳು ಖುಷಿ ಪಟ್ಟರು. ಶಾಲೆಯ ಕಡೆಗೆ ಹೋದರು.

NOT TO BE REPUBLISHED

ಚಿತ್ರಕಥೆ ಓದಿದೆಯಲ್ಲವೆ? ಸವಿತಾ, ಫಾತಿಮಾ, ನೀರಜ್ ಹಾಗೂ ಮೇರಿ ರಸ್ತೆಯ ಬದಿಯಲ್ಲಿ ಹಾಕಿದ ಕೆಲವು ಸಂಕೇತಗಳು ಹಾಗೂ ಅವುಗಳ ಸೂಚನೆಗಳನ್ನು ಸಂಚಾರ ಪೊಲೀಸರಿಂದ ಕೇಳಿ ತಿಳಿದುಕೊಂಡಿದ್ದಾರೆ. ನೀನೂ ತಿಳಿದುಕೊಂಡೆಯಲ್ಲವೆ? ಹಾಗಾದರೆ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.

- ಪಾದಚಾರಿಗಳು ರಸ್ತೆಯನ್ನು ಎಲ್ಲಿ ದಾಟಬೇಕು?

  _____

  _____

- ಸಂಕೇತ ದೀಪದಲ್ಲಿ ಯಾವ ಬಣ್ಣದ ದೀಪಗಳಿವೆ?

  _____

  _____

  _____

- ಸಂಕೇತ ದೀಪಗಳಿಂದಾಗುವ ಒಂದು ಅನುಕೂಲವನ್ನು ಇಲ್ಲಿ ಬರೆ.

  _____

- ನೀನು ಶಾಲೆಗೆ ಬರುವ ದಾರಿಯಲ್ಲಿ ಸಂಕೇತ ದೀಪಗಳಿವೆಯೇ?

  _____

- ನೀನು ರಸ್ತೆ ದಾಟುವಾಗ ತೆಗೆದುಕೊಳ್ಳುವ ಎಚ್ಚರಿಕೆಗಳು ಯಾವುವು? ಏಕೆ?

  _____

  _____

  _____

  _____

@KTBS NOT TO BE REPUBLISHED

ರಸ್ತೆಯ ಬದಿಯಲ್ಲಿ ಹಾಕುವ ಕೆಲವು ಸಂಕೇತಗಳು ಮತ್ತು ಅವುಗಳ ಸೂಚನೆಯನ್ನು ಮುಂದೆ ಕೊಟ್ಟಿದೆ. ಅವುಗಳನ್ನು ಗೆರೆ ಎಳೆದು ಹೊಂದಿಸು.

ಅ	ಬ
	ರಸ್ತೆಯಲ್ಲಿ ಉಬ್ಬು ಇದೆ. ನಿಮ್ಮ ವಾಹನದ ವೇಗ ಕಡಿಮೆ ಮಾಡಬೇಕು.
	ಲೆವೆಲ್ ಕ್ರಾಸಿಂಗ್ ಗೇಟ್. ತೆಗೆದಿದೆಯೋ ಮುಚ್ಚಿದೆಯೋ ಎಂಬುದನ್ನು ಖಚಿತಪಡಿಸಿಕೊಂಡು ಚಲಿಸಬೇಕು.
	ಎಡಕ್ಕೆ ಚಲಿಸಬೇಕು.
	ಮುಂದೆ ಆಸ್ಪತ್ರೆ ಇದೆ. ವಾಹನದ ವೇಗವನ್ನು ಕಡಿಮೆಗೊಳಿಸಬೇಕು.
	ವಾಹನಗಳನ್ನು ನಿಲ್ಲಿಸಬಹುದು.
	ನಿಧಾನವಾಗಿ ಚಲಿಸಿ.
	ಜೋರಾಗಿ ಶಬ್ದ ಮಾಡಬಾರದು.

@KTBS NOT TO BE REPUBLISHED

ನಾವು ಸುರಕ್ಷಿತವಾಗಿ ರಸ್ತೆಯಲ್ಲಿ ಸಂಚರಿಸಲು ಇರುವ ನಿಯಮಗಳೇ **ಸಂಚಾರ ನಿಯಮಗಳು**. ನಮ್ಮ ಮತ್ತು ವಾಹನಗಳ ಸುರಕ್ಷತೆಗಾಗಿ ರಸ್ತೆಯ ಅಲ್ಲಲ್ಲಿ ಸಂಕೇತಗಳು ಮತ್ತು ಸೂಚನಾ ಫಲಕಗಳನ್ನು ಹಾಕಿರುತ್ತಾರೆ.

ಸಂಚಾರ ನಿಯಮಗಳ ಪಾಲನೆಯಿಂದ ಆಗುವ ಎರಡು ಅನುಕೂಲಗಳನ್ನು ಇಲ್ಲಿ ಬರೆ.

1. _____

2. _____

ಕೆಳಗಿನ ಪಟ್ಟಿಯಲ್ಲಿ ಪಾದಚಾರಿಗಳು ಅನುಸರಿಸಬೇಕಾದ ಕೆಲವು ಸಂಚಾರ ನಿಯಮಗಳನ್ನು ಕೊಟ್ಟಿದೆ. ಸೂಕ್ತವಾದುದರ ಮುಂದೆ (✓) ಗುರುತು ಹಾಕು. ತಪ್ಪಾಗಿದ್ದರೆ ಅದರ ಮುಂದಿನ ಸ್ಥಳದಲ್ಲಿ ಸರಿಪಡಿಸಿ ಬರೆ.

ಕ್ರ. ಸಂ.	ಸಂಚಾರ ನಿಯಮ	ಸರಿ	ತಪ್ಪು	ಸರಿಪಡಿಸಿದ ಉತ್ತರ
1.	ರಸ್ತೆ ದಾಟಲು ಝೀಬ್ರಾ ಪಟ್ಟಿಯನ್ನು ಬಳಸಬೇಕು.			
2.	ಸಂಕೇತ ದೀಪಗಳಿಲ್ಲದ ಕಡೆಗೆ ರಸ್ತೆಯ ಎಡಬಲಗಳಲ್ಲಿ ವಾಹನ ಬರುತ್ತಿದ್ದರೂ ರಸ್ತೆ ದಾಟಬಹುದು.			
3.	ರೈಲು ಬರುವಾಗ ರೈಲ್ವೆ ಲೆವೆಲ್ ಕ್ರಾಸಿಂಗ್ ದಾಟಬಹುದು.			
4.	ರಸ್ತೆಯ ಮಧ್ಯೆ ಆಟ ಆಡಬಾರದು			
5.	ವಾಹನ ಚಲಿಸುತ್ತಿರುವಾಗ ಹತ್ತಬಹುದು ಅಥವಾ ಇಳಿಯಬಹುದು.			
6.	ಸರದಿ ಸಾಲಿನಲ್ಲಿ ನಿಂತು ವಾಹನವನ್ನು ಹತ್ತಬೇಕು.			
7.	ಪಾದಚಾರಿಗಳು ರಸ್ತೆ ಬಲಬದಿಯಲ್ಲಿ ನಡೆಯಬೇಕು.			

NOT TO BE REPUBLISHED @KTBS

ಕೆಳಗೆ ನೀಡಲಾದ ಸಂಕೇತ ಫಲಕಗಳನ್ನು ನಿನ್ನ ಊರಿನಲ್ಲಿ ಎಲ್ಲೆಲ್ಲಿ ಹಾಕಬಹುದು ಎಂಬುದನ್ನು ಖಾಲಿ ಸ್ಥಳದಲ್ಲಿ ಬರೆ. ಒಂದು ಉದಾಹರಣೆ ಕೊಡಲಾಗಿದೆ. ಗಮನಿಸು.

ಸಂಕೇತ	ಹಾಕಬಹುದಾದ ಸ್ಥಳ
	ನನ್ನ ಶಾಲೆಯ ಹತ್ತಿರ
	
	
	
	
	
	

@KTBS NOT TO BE REPUBLISHED

ಓದಿ–ತಿಳಿ

ರಸ್ತೆಯ ನಿಯಮಗಳನ್ನು ಪಾಲಿಸಿದರೆ ನಮಗೆ ತೊಂದರೆಯಾಗುವುದಿಲ್ಲ. ಸಂಚಾರ ನಿಯಮಗಳನ್ನು ಸರಿಯಾಗಿ ಅನುಸರಿಸಿದರೆ ರಸ್ತೆ ಅಪಘಾತಗಳನ್ನು ತಪ್ಪಿಸಬಹುದು.

ಮನೆಯಲ್ಲಿ ಮತ್ತು ಶಾಲೆಯಲ್ಲಿ ಸಂಭವಿಸಬಹುದಾದ ಕೆಲವು ಅಪಘಾತಗಳ ಬಗ್ಗೆ ನೀನು ಈಗಾಗಲೇ ತಿಳಿದಿರುವೆ. **ಉದಾಹರಣೆಗೆ,** ವಿದ್ಯುತ್ ಉಪಕರಣಗಳು, ಗ್ಯಾಸ್ ಒಲೆ, ಚಾಕು, ಬ್ಲೇಡು, ಈಳಿಗೆ ಮಣೆ ಮುಂತಾದವುಗಳನ್ನು ಎಚ್ಚರಿಕೆಯಿಂದ ಬಳಸದಿದ್ದರೆ ಅಪಾಯಗಳಿಗೆ ತುತ್ತಾಗುವ ಸಂಭವಗಳಿವೆ. ನಿನಗೆ ತಿಳಿದಿರುವ 5 ಅಪಘಾತ ಸನ್ನಿವೇಶಗಳನ್ನು ಈ ಪಟ್ಟಿಯಲ್ಲಿ ಬರೆ. ಅದಕ್ಕೆ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳನ್ನೂ ಬರೆ.

ಕ್ರ.ಸಂ.	ಅಪಘಾತದ ಸನ್ನಿವೇಶ	ಎಚ್ಚರಿಕೆಗಳು
1.		
2.		
3.		
4.		
5.		

@KTBS NOT TO BE REPUBLISHED

ನಿನಗಿದು ಗೊತ್ತೆ?

- ವಾಹನಗಳ ಸಂಚಾರ ದಟ್ಟಣೆ ಕಡಿಮೆ ಮಾಡಲು, ಇಂಧನ ಉಳಿಸಲು ಹಾಗೂ ಗಾಳಿ ಮಲಿನವಾಗುವುದನ್ನು ತಪ್ಪಿಸಲು ಬೆಂಗಳೂರಿನಲ್ಲಿ **ಬಸ್ ದಿನ** ಆಚರಿಸಲಾಗುತ್ತದೆ. ಬಸ್ ದಿನದಂದು ಸ್ವಂತ ವಾಹನವಿರುವ ಅನೇಕ ಜನರು ಬಸ್‌ನಲ್ಲಿಯೇ ಸಂಚಾರ ಮಾಡುತ್ತಾರೆ.
- ಪ್ರತಿ ವರ್ಷ ಜನವರಿ ತಿಂಗಳಿನಲ್ಲಿ ಒಂದು ವಾರ ಸಾರಿಗೆ ಸಂಸ್ಥೆಯವರು 'ರಸ್ತೆ ಸುರಕ್ಷತಾ ಸಪ್ತಾಹ'ವನ್ನು ಆಚರಿಸುತ್ತಾರೆ.
- ನಗರ ಪ್ರದೇಶಗಳಲ್ಲಿ ಸಾರಿಗೆ ಇಲಾಖೆಯವರು ಶಾಲಾ ಮಕ್ಕಳಿಗೆ ರಸ್ತೆ ಸಂಚಾರ ನಿಯಮಗಳ ಕುರಿತು ತರಬೇತಿಯನ್ನು ನೀಡುತ್ತಾರೆ.
- ರಸ್ತೆ ಅಪಘಾತಗಳಾದಾಗ ತುರ್ತು ಚಿಕಿತ್ಸೆಗಾಗಿ ನಮ್ಮ ರಾಜ್ಯದಲ್ಲಿ 108 ಸಂಖ್ಯೆ ಇರುವ ಆ್ಯಂಬುಲೆನ್ಸ್ ವಾಹನದ ಉಚಿತ ವ್ಯವಸ್ಥೆ ಇದೆ.

✳✳✳

ಪಾಠ – 15

ಸಾರಿಗೆ ಮತ್ತು ಸಂಪರ್ಕ

B6P2P5

ಈ ಪಾಠವನ್ನು ಕಲಿತ ನಂತರ ನೀನು,


- ಸಾರಿಗೆಯಲ್ಲಿ ಪ್ರಾಣಿಗಳ ಬಳಕೆಯನ್ನು ಗುರುತಿಸುವೆ.
- ಪ್ರಾಣಿಗಳ ಬಗ್ಗೆ ಸಂವೇದನಾಶೀಲತೆಯಿಂದ ವರ್ತಿಸುವೆ.
- ಕಾಲದಿಂದ ಕಾಲಕ್ಕೆ ಬದಲಾದ ವಿವಿಧ ರೀತಿಯ ಸಂಪರ್ಕ ಸಾಧನಗಳನ್ನು ಗುರುತಿಸುವೆ.


ಇಲ್ಲಿ ಕೊಟ್ಟಿರುವ ಚಿತ್ರಗಳನ್ನು ನೋಡು. ನೀನು ಗಮನಿಸಿದ್ದನ್ನು ಬರೆ.

@KTBS NOT TO BE REPUBLISHED







- ನಿನ್ನ ಊರಿನಲ್ಲಿ ಪ್ರಾಣಿಗಳನ್ನು ಸಾರಿಗೆಗೆ ಬಳಸುತ್ತಾರೆಯೆ?

  _____


- ಯಾವ ಯಾವ ಪ್ರಾಣಿಗಳನ್ನು ಬಳಸುತ್ತಾರೆ?


  _____

- ಅವುಗಳನ್ನು ಯಾವ ಕೆಲಸಗಳಿಗೆ ಬಳಸುತ್ತಾರೆ?


  _____


ಈ ಚಿತ್ರಗಳನ್ನು ಗಮನಿಸು. ಸಾರಿಗೆಯಲ್ಲಾದ ಬದಲಾವಣೆಯನ್ನು ಅನುಕ್ರಮವಾಗಿ ಗುರುತಿಸಿ, ಕ್ರಮ ಸಂಖ್ಯೆ ಹಾಕು.







@KTBS NOT TO BE REPUBLISHED













ಸಾಗಾಣಿಕೆಗಾಗಿ ಹಿಂದಿನ ಕಾಲದಲ್ಲಿ ಬಳಸುತ್ತಿದ್ದ ಪ್ರಾಣಿಗಳ ಹೆಸರನ್ನು ತಿಳಿದು ಬರೆ.

ಸಾಗಾಣಿಕೆಗಾಗಿ ಇಂದು ಬಳಸುವ ಪ್ರಾಣಿಗಳು ಯಾವುವು? ತಿಳಿದು ಬರೆ.

ಅಂದು ಮತ್ತು ಇಂದು ಸಾರಿಗೆಯಲ್ಲಿ ಪ್ರಾಣಿಗಳ ಬಳಕೆಯಲ್ಲಿ ವ್ಯತ್ಯಾಸವಿದೆಯೇ? ಹಿರಿಯರ ಸಹಾಯದಿಂದ ತಿಳಿದು ಬರೆ.

_____

_____

_____

@KTBS NOT TO BE REPUBLISHED

ನಿನ್ನ ಊರಿನಲ್ಲಿ ಸಾಗಾಣಿಕೆಗಾಗಿ ಬಳಸುವ ಪ್ರಾಣಿಗಳನ್ನು ಹೇಗೆ ನೋಡಿಕೊಳ್ಳುತ್ತಾರೆ ಎಂಬುದನ್ನು ಇಲ್ಲಿ ಬರೆ.

_____

_____

_____

_____

_____

ಸಾಗಾಣಿಕೆಗಾಗಿ ಬಳಸುವ ಪ್ರಾಣಿಗಳನ್ನು ಹೇಗೆ ಪೋಷಿಸಬೇಕು ಎಂದು ಹಿರಿಯರ ನೆರವಿನಿಂದ ತಿಳಿದು ಇಲ್ಲಿ ಬರೆ.

_____


_____

_____

_____

_____

@KTBS NOT TO BE REPUBLISHED




ಓದಿ–ತಿಳಿ


ಸಾಗಾಣಿಕೆಗಾಗಿ ಬಳಸುವ ಪ್ರಾಣಿಗಳ ಮೇಲೆ ಪ್ರೀತಿ ಹಾಗೂ ಸಂವೇದನಾಶೀಲತೆ ನಮಗಿರಬೇಕು.

ಸಾಗಣೆಗೆ ಬಳಸುವ ಪ್ರಾಣಿಗಳ ಚಿತ್ರಗಳನ್ನು ಸಂಗ್ರಹಿಸಿ ಇಲ್ಲಿ ಅಂಟಿಸು. ಇಲ್ಲವೆ ಚಿತ್ರಿಸು.

©KTBS NOT TO BE REPUBLISHED

ಈ ಚಿತ್ರವನ್ನು ಸರಿಯಾಗಿ ಗಮನಿಸು. ಅಲ್ಲಿ ಕೊಟ್ಟಿರುವ ವಿವರಗಳನ್ನು ಓದು ನಂತರ ಹೊಂದಿಸು. ಒಂದು ಉದಾಹರಣೆ ಕೊಟ್ಟಿದೆ.





ನಿಮ್ಮ ಊರಿನ ಅಂಚೆ ಕಚೇರಿಗೆ ಭೇಟಿ ನೀಡಿ ಅಥವಾ ಅಂಚೆಯಣ್ಣನನ್ನು ಸಂಪರ್ಕಿಸಿ ಕೆಳಗೆ ಕೊಟ್ಟಿರುವ ವಿಷಯದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಬರೆ.



ಅಂಚೆ ಚೀಟಿ	
ಅಂಚೆ ಪತ್ರ	
ಪಾರ್ಸಲ್	
ಸ್ಪೀಡ್ ಪೋಸ್ಟ್	

@KTBS NOT TO BE REPUBLISHED

ನಿನ್ನ ಊರಿನ ಜಾತ್ರೆಗೆ ಬರಬೇಕೆಂದು ನಿನ್ನ ಗೆಳೆಯರಿಗೆ ವಿಳಾಸ ಸಹಿತ ಅಂಚೆ ಪತ್ರ ಬರೆದು ಅಂಚೆ ಡಬ್ಬಿಗೆ ಹಾಕು.


	ಗೆ _____ _____ _____

ಇಲ್ಲಿ ಕೊಟ್ಟಿರುವ ಚಿತ್ರಗಳನ್ನು ಸರಿಯಾಗಿ ಗಮನಿಸು. ನೀನು ಹಾಗೂ ನಿನ್ನ ಮನೆಯವರು ಬಳಸುವ ಕೆಳಗಿನ ಸಂಪರ್ಕ ಸಾಧನಗಳಿಗೆ (✓) ಗುರುತು ಹಾಕು.







@KTBS NOT TO BE REPUBLISHED

ಹಿಂದಿನ ಕಾಲದಲ್ಲಿ ಬಳಸುತ್ತಿದ್ದ ಮತ್ತು ಈಗಿನ ಕಾಲದಲ್ಲಿ ಬಳಸುತ್ತಿರುವ ಸಂಪರ್ಕ ಸಾಧನಗಳ ಬಗ್ಗೆ ಹಿರಿಯರಿಂದ ತಿಳಿದು ಬರೆ.


ಹಿಂದಿನ ಕಾಲದಲ್ಲಿ ಬಳಸುತ್ತಿದ್ದ ಸಂಪರ್ಕ ಸಾಧನಗಳು	ಈಗಿನ ಕಾಲದಲ್ಲಿ ಬಳಸುತ್ತಿರುವ ಸಂಪರ್ಕ ಸಾಧನಗಳು

ಏನಾದರೂ ವ್ಯತ್ಯಾಸವಿದೆಯೇ? ಗಮನಿಸು.



ಓದಿ –ತಿಳಿ

ಕೆಳಗಿನ ಚಿತ್ರ ನೋಡಿ. ವಿವರಗಳನ್ನು ಓದು.

	ಬರವಣಿಗೆಯ ಮೂಲಕ ಅಂಚೆ ಕಚೇರಿಯ ಸಹಾಯದಿಂದ ಕಳುಹಿಸುವ ಸಂಪರ್ಕ ಸಾಧನ.
	ಅತಿ ದೂರದಲ್ಲಿರುವವರೊಂದಿಗೆ ನೇರವಾಗಿ ಮಾತನಾಡಿ ಸಂಪರ್ಕಿಸಬಹುದಾದ ಸಾಧನ.
	ದೇಶ ವಿದೇಶಗಳ ಪ್ರತಿ ದಿನದ ಸುದ್ದಿ ಸಮಾಚಾರ ತಿಳಿಸಿಕೊಡುವಂತಹ ಸಂಪರ್ಕ ಸಾಧನ.
	ಪ್ರಾದೇಶಿಕ ಹಾಗೂ ದೇಶ–ವಿದೇಶಗಳ ಸುದ್ದಿ, ಮನರಂಜನೆ ಇತ್ಯಾದಿಗಳನ್ನು ನೋಡಿ, ಕೇಳಿ ತಿಳಿಯಲು ಸಾಧ್ಯವಾಗುವಂತಹ ಆಕರ್ಷಣೀಯ ಸಂಪರ್ಕ ಸಾಧನ.
	ಮನರಂಜನೆಯೊಂದಿಗೆ ಪ್ರಾದೇಶಿಕ ಹಾಗೂ ದೇಶ–ವಿದೇಶಗಳ ಸುದ್ದಿ ಸಮಾಚಾರವನ್ನು ಕೇಳಿ ತಿಳಿಯುವ ಸಂಪರ್ಕ ಸಾಧನ.
	ಪ್ರಪಂಚದ ಯಾವುದೇ ಮಾಹಿತಿಯನ್ನು ಅತಿ ವೇಗವಾಗಿ ಪಡೆಯಬಹುದಾದ ಅಥವಾ ಕಳುಹಿಸಬಹುದಾದ ಅದ್ಭುತ ಸಂಪರ್ಕ ಸಾಧನ.

© KTBS NOT TO BE REPUBLISHED

ವಿವಿಧ ಸಂಪರ್ಕ ಸಾಧನಗಳ ಚಿತ್ರ ಸಂಗ್ರಹಿಸಿ ಅಂಟಿಸು. ಪ್ರತಿ ಚಿತ್ರದ ಕೆಳಗೆ ಅದರ ಹೆಸರು ಮತ್ತು ಅದನ್ನು ಕುರಿತು ಒಂದೆರಡು ಸಾಲು ಬರೆ.

@KTBS
NOT TO BE REPUBLISHED



ಓದಿ–ತಿಳಿ

ಕಂಡು ಹಿಡಿದವರು

- ರೈಟ್ ಸಹೋದರರು – ವಿಮಾನ
- ಗ್ರಹಾಂ ಬೆಲ್ – ದೂರವಾಣಿ
- ಚಾರ್ಲ್ಸ್ ಬ್ಯಾಬೇಜ್ – ಗಣಕ ಯಂತ್ರ
- ಜಾನ್ ಬೈಯರ್ಡ್ – ದೂರದರ್ಶನ
- ಮಾರ್ಕೋನಿ – ರೇಡಿಯೋ

ನಿನಗಿದು ಗೊತ್ತೆ?

- ರೈಲು ಸಾರಿಗೆ ಭಾರತದ ಪ್ರಧಾನ ಸಾರಿಗೆ ಸಾಧನ.
- 1853ರಲ್ಲಿ ಪ್ರಪ್ರಥಮ ಬಾರಿಗೆ ಭಾರತದಲ್ಲಿ ರೈಲೊಂದು ಮುಂಬೈಯಿಂದ ಥಾಣೆಯವರೆಗೆ 34 km ದೂರ ಚಲಿಸಿತ್ತು.
- ಒಂಟೆಯು ಮರಳಿನಲ್ಲಿ ಸಂಚರಿಸಲು ಅನುಕೂಲವಾಗುವಂತಹ ದೇಹರಚನೆಯನ್ನು ಪಡೆದಿದೆ. ಇದನ್ನು ಮರುಭೂಮಿ ಸಾರಿಗೆಯಲ್ಲಿ ಹೆಚ್ಚಾಗಿ ಬಳಸುತ್ತಾರೆ. ಆದ್ದರಿಂದಲೆ ಇದನ್ನು **ಮರುಭೂಮಿಯ ಹಡಗು** ಎಂದು ಕರೆಯುತ್ತಾರೆ.
- ಸಮುದ್ರದ ಆಳದಲ್ಲಿ ಸಂಚರಿಸುವ ನೌಕೆ ಸಬ್‌ಮರಿನ್ (ಜಲಾಂತರಗಾಮಿ).
- ಆಕಾಶನೌಕೆಗಳಲ್ಲಿ ಭೂಮಿಯಿಂದ ಹೊರಗಡೆ ಹೋಗಿ ಅಧ್ಯಯನ ನಡೆಸಬಹುದು.
- ದಿನನಿತ್ಯ ಬರುವ ಪತ್ರಿಕೆ – ದೈನಿಕ, ಏಳು ದಿನಕ್ಕೊಮ್ಮೆ ಬರುವ ಪತ್ರಿಕೆ – ವಾರ ಪತ್ರಿಕೆ, ಹದಿನೈದು ದಿನಕ್ಕೊಮ್ಮೆ ಬರುವ ಪತ್ರಿಕೆ – ಪಾಕ್ಷಿಕ ಪತ್ರಿಕೆ, ತಿಂಗಳಿಗೊಮ್ಮೆ ಬರುವ ಪತ್ರಿಕೆ – ಮಾಸಿಕ ಪತ್ರಿಕೆ.
- ಸಾರಿಗೆಗೆ ಬಳಸಲಾದ ಮೊಟ್ಟ ಮೊದಲ ಪ್ರಾಣಿ ನಾಯಿ.
- ಪ್ರಪಂಚದಲ್ಲಿ ಕೆಲವು ರೈಲುಗಳು ಗಂಟೆಗೆ 350 kmಗೂ ಹೆಚ್ಚಿನ ವೇಗದಲ್ಲಿ ಚಲಿಸುತ್ತವೆ. ಇವುಗಳಲ್ಲಿ ಪ್ರಯಾಣಿಸಿದರೆ ಬೆಂಗಳೂರಿನಿಂದ ಹುಬ್ಬಳ್ಳಿಯನ್ನು ಕೇವಲ ಒಂದು ಗಂಟೆಯಲ್ಲಿ ತಲುಪಬಹುದು!

© KTBS NOT TO BE REPUBLISHED

ಪಾಠ – 16


ಬದಲಾಗುತ್ತಿರುವ ಕುಟುಂಬಗಳು

E5U9V4

ಈ ಪಾಠವನ್ನು ಕಲಿತ ನಂತರ ನೀನು,

- ಜನರು ಒಟ್ಟಿಗೆ ವಾಸಿಸುವ ವ್ಯವಸ್ಥೆಯಲ್ಲಿ ಕಾಲಕ್ರಮೇಣ ಆದ ಬದಲಾವಣೆಯನ್ನು ಗುರುತಿಸುವೆ.
- ಬದಲಾವಣೆಯನ್ನು ಸರಳ ವಂಶವೃಕ್ಷದಲ್ಲಿ ದಾಖಲಿಸುವೆ.

ಚಿತ್ರದಲ್ಲಿ ತೋರಿಸಿರುವುದು ರಾಜಮ್ಮ ರಾಮಯ್ಯನ ಕುಟುಂಬದ ಹಿಂದಿನ ವರ್ಷದ ಚಿತ್ರ. ಸರಿಯಾಗಿ ಗಮನಿಸು.



© KTBS NOT TO BE REPUBLISHED

ಈ ಕುಟುಂಬದಲ್ಲಿ ಎಷ್ಟು ಜನರಿದ್ದಾರೆ?

_____

ರಾಮಯ್ಯನಿಗೆ ಎಷ್ಟು ಮಕ್ಕಳು? ಯಾರು ಯಾರು?


_____

_____

ಗೋಪಿಗೆ ಎಷ್ಟು ಮಕ್ಕಳು? ಯಾರು ಯಾರು?

_____

_____



ಈ ವರ್ಷ ರಾಮಯ್ಯನ ಕುಟುಂಬದಲ್ಲಿ ಆದ ಬದಲಾವಣೆಗಳನ್ನು ಗಮನಿಸು.

@KTBS NOT TO BE REPUBLISHED

ಗೋಪಿ ಕುಟುಂಬವು ಬೇರೆ ಊರಿಗೆ ಹೋಗಲು ಕಾರಣವೇನು?

_____

_____

ಪಿಂಕಿ ಪಟ್ಟಣಕ್ಕೆ ಏಕೆ ಹೋಗುತ್ತಾಳೆ?

_____

ಶೀಲಾ ಈ ಕುಟುಂಬಕ್ಕೆ ಏಕೆ ಬರುತ್ತಾಳೆ?

_____

ಸುರೇಶನ ಕುಟುಂಬದ ಹೊಸ ಸದಸ್ಯ ಯಾರು?

_____

ರಾಮಯ್ಯನ ಕುಟುಂಬದ ವಂಶವೃಕ್ಷ ಬರೆ. ಕುಟುಂಬದಿಂದ ಹೊರಗೆ ಹೋದವರಿಗೆ ವೃತ್ತ ಸುತ್ತು. ಬಂದವರಿಗೆ ಚೌಕ ಬರೆ. ರಾಮಯ್ಯನ ಕುಟುಂಬದಲ್ಲಾದ ಬದಲಾವಣೆಯನ್ನು ಗುರುತಿಸು.

@KTBS NOT TO BE REPUBLISHED

ಈ ವರ್ಷ ರಾಮಯ್ಯನ ಕುಟುಂಬದ ಸದಸ್ಯರ ಸಂಖ್ಯೆ ಎಷ್ಟು? ಏಕೆ?

_____

_____



ಓದಿ–ತಿಳಿ

ಕುಟುಂಬದಲ್ಲಿರುವ ಕೆಲವರು ಹಲವು ಕಾರಣಗಳಿಂದಾಗಿ ಬೇರೆಡೆ ಹೋಗುತ್ತಾರೆ. ಹೊಸ ಸದಸ್ಯರು ಕುಟುಂಬಕ್ಕೆ ಬಂದು ಸೇರುತ್ತಾರೆ.

ನಿನ್ನ ಕುಟುಂಬದ ವಂಶವೃಕ್ಷ ಬರೆ.

ನಿನ್ನ ಕುಟುಂಬದಲ್ಲಿ ಹೊಸದಾಗಿ ಯಾರಾದರೂ ಸದಸ್ಯರು ಸೇರಿದ್ದರೆ ವಂಶವೃಕ್ಷದಲ್ಲಿ ಅವರಿಗೆ △ ಗುರುತು ಮಾಡು. ಅವರ ವಿವರಗಳನ್ನು ಇಲ್ಲಿ ಬರೆ.


ಹೆಸರು	ಸಂಬಂಧ	ಬಂದ ಊರು	ಬಂದ ಕಾರಣ

ನಿನ್ನ ಕುಟುಂಬದಿಂದ ಯಾರಾದರೂ ಸದಸ್ಯರು ಬೇರೆಡೆಗೆ ಹೋಗಿದ್ದರೆ ಅವರಿಗೆ ○ ಗುರುತು ಹಾಕು. ಅವರ ವಿವರಗಳನ್ನು ಇಲ್ಲಿ ಬರೆ.

ಹೆಸರು	ಸಂಬಂಧ	ಈಗಿರುವ ಊರು	ಬೇರೆಡೆಗೆ ಹೋಗಲು ಕಾರಣ

©KTBS NOT TO BE REPUBLISHED

ಇಲ್ಲಿ ಎರಡು ಕುಟುಂಬಗಳ ಸರಳವಾದ ವಂಶವೃಕ್ಷ ನೀಡಿದೆ. ಇದರಲ್ಲಿ ○ ದಲ್ಲಿ ತೋರಿಸಿದವರು ಈ ಕುಟುಂಬದಿಂದ ಬೇರೆ ಹೋಗಿದ್ದಾರೆ. △ ದಲ್ಲಿ ಇರುವವರು ಈ ಕುಟುಂಬಕ್ಕೆ ಬಂದು ಸೇರಿದ್ದಾರೆ. ಇವುಗಳನ್ನು ಗಮನಿಸು.



ಸಲೀಂ ಮತ್ತು ಫಾತಿಮಾರಿಗೆ ಎಷ್ಟು ಮಕ್ಕಳು?

_____

ಸಲೀಂ ಕುಟುಂಬದಲ್ಲಿ ಈಗ ಎಷ್ಟು ಜನ ಇದ್ದಾರೆ?


_____

ಸಲೀಂ ಕುಟುಂಬದಿಂದ ಬೇರೆ ಕುಟುಂಬಕ್ಕೆ ಹೋದವರ ಸಂಖ್ಯೆ ಎಷ್ಟು?

_____

ಬೇರೆ ಕುಟುಂಬದಿಂದ ಸಲೀಂ ಕುಟುಂಬಕ್ಕೆ ಬಂದಿರುವವರ ಸಂಖ್ಯೆ ಎಷ್ಟು?

_____



© KTBS NOT TO BE REPUBLISHED

ರಾಜುವಿನ ಕುಟುಂಬದಲ್ಲಿ ಎಷ್ಟು ಜನರಿದ್ದಾರೆ?

_____

ರಾಜುವಿನ ಕುಟುಂಬಕ್ಕೆ ಬಂದಿರುವವರ ಸಂಖ್ಯೆ ಎಷ್ಟು?

_____

ರಾಜುವಿನ ಕುಟುಂಬದಿಂದ ಹೊರಗೆ ಹೋಗಿರುವ ಸದಸ್ಯರ ಸಂಖ್ಯೆ ಎಷ್ಟು?

_____

ಸಲೀಂ ಮತ್ತು ರಾಜುವಿನ ಕುಟುಂಬದಲ್ಲಿ ಯಾವ ಕುಟುಂಬ ದೊಡ್ಡದು? ಏಕೆ?

_____

_____

ಹಿರಿಯರ ಸಹಾಯ ಪಡೆದು ನಾಲ್ಕು ವರ್ಷದ ಹಿಂದಿನ ನಿನ್ನ ವಂಶವೃಕ್ಷವನ್ನು ಬರೆ. ಈಗಿನ ನಿನ್ನ ಕುಟುಂಬದ ವಂಶವೃಕ್ಷ ಬರೆ.

4 ವರ್ಷದ ಹಿಂದಿನ ವಂಶವೃಕ್ಷ	ಈಗಿನ ವಂಶವೃಕ್ಷ

@KTBS NOT TO BE REPUBLISHED

ನೀನು ಬರೆದ ಎರಡು ವಂಶವೃಕ್ಷಗಳನ್ನು ಹೋಲಿಸಿ ಉತ್ತರ ಬರೆ.

ಆಗಿನ ಮತ್ತು ಈಗಿನ ನಿನ್ನ ಕುಟುಂಬಗಳಲ್ಲಿ ಯಾವುದು ದೊಡ್ಡ ಕುಟುಂಬ?

_____

ಈ ನಾಲ್ಕು ವರ್ಷಗಳಲ್ಲಿ ನಿನ್ನ ಕುಟುಂಬದಲ್ಲಿ ಏನಾದರೂ ಬದಲಾವಣೆ ಇದೆಯೇ ಇಲ್ಲವೆ? ಬದಲಾವಣೆಯಾಗಿದ್ದರೆ ಕಾರಣ ಬರೆ.

_____

_____

_____

_____

ನಿನ್ನ ಮನೆಯ ನೆರೆಹೊರೆಯ ಕುಟುಂಬಗಳನ್ನು ಗಮನಿಸು. ಒಂದು ದೊಡ್ಡ ಕುಟುಂಬ ಮತ್ತು ಚಿಕ್ಕ ಕುಟುಂಬದ ಸರಳ ವಂಶವೃಕ್ಷ ರಚಿಸು.

ದೊಡ್ಡ ಕುಟುಂಬ	ಚಿಕ್ಕ ಕುಟುಂಬ

@KTBS NOT TO BE REPUBLISHED

ಕುಟುಂಬದ ಸದಸ್ಯರು ಬೇರೆ ಕಡೆಗೆ ಹೋಗಿ ನೆಲೆಸಲು ಇರುವ ಕಾರಣಗಳನ್ನು ಪಟ್ಟಿ ಮಾಡು. ಹಿರಿಯರ ನೆರವನ್ನು ಪಡೆದು ಬರೆ.

_____

_____

_____

_____

_____

ನಿನಗಿದು ಗೊತ್ತೆ?

- ಧಾರವಾಡದಿಂದ 25 km ದೂರದಲ್ಲಿರುವ ಲೋಕೂರು ಎಂಬ ಗ್ರಾಮದಲ್ಲಿ 7 ತಲೆಮಾರುಗಳಿಂದ ಜನರು ಒಂದೇ ಕುಟುಂಬದಲ್ಲಿ ವಾಸಿಸುತ್ತಿದ್ದಾರೆ. ಇಂದು ಈ ದೊಡ್ಡ ಕುಟುಂಬದ ಸದಸ್ಯರ ಸಂಖ್ಯೆ 180.
- ಎಂ.ಎಂ. ಕೈಗಾರಿಕಾ ಕುಟುಂಬ ಎಂದೇ ಗುರುತಿಸಲ್ಪಡುವ ಕೃಷ್ಣಮೂರ್ತಿಯವರ ಕುಟುಂಬದಲ್ಲಿ 40 ಜನರಿದ್ದು, ಬೆಂಗಳೂರಿನಲ್ಲಿ ವಾಸವಾಗಿದ್ದಾರೆ.
- ಪರಸ್ಪರ ಅಸಹಕಾರ, ಹೊಂದಾಣಿಕೆಯ ಕೊರತೆ, ಕೆಲಸದ ಹಂಚಿಕೆಯಲ್ಲಿ ಅಸಮಾನತೆ, ಹೊಸ ಹೊಸ ಅವಶ್ಯಗಳು ಮುಂತಾದುವುಗಳಿಂದಾಗಿ ದೊಡ್ಡ ಕುಟುಂಬಗಳು ಚಿಕ್ಕ ಕುಟುಂಬಗಳಾಗಿ ಬದಲಾವಣೆಗೊಂಡಿವೆ.
- 3 ತಲೆಮಾರಿನ ವಂಶವೃಕ್ಷ ಅಥವಾ ಮಾಹಿತಿಯನ್ನು ಅನೇಕ ವ್ಯವಹಾರಗಳಲ್ಲಿ, ಧಾರ್ಮಿಕ ವಿಧಿ ವಿಧಾನಗಳಲ್ಲಿ ಬಳಸುತ್ತಾರೆ.

© KTBS NOT TO BE REPUBLISHED



ಪಾಠ – 17

ಮನೆಯೇ ಮೊದಲ ಪಾಠಶಾಲೆ

P6V5E4

ಈ ಪಾಠವನ್ನು ಕಲಿತ ನಂತರ ನೀನು,

- ಧರ್ಮ, ಮೌಲ್ಯಗಳು, ಸಾಂಸ್ಕೃತಿಕ ಆಚರಣೆಗಳಿಂದ ಕೂಡಿರುವ ಒಂದು ಸಣ್ಣ ಘಟಕವೆ ಕುಟುಂಬ ಎಂದು ಅರಿಯುವೆ.
- ಕುಟುಂಬದ ಮೌಲ್ಯಗಳಿಂದ ಸಮಾಜದಲ್ಲಿ ಆದ ಬದಲಾವಣೆಯನ್ನು ಗಮನಿಸುವೆ.



ಪವಿತ್ರ

ನಮ್ಮ ಮನೆಯಲ್ಲಿ ಅಪ್ಪ ದಿನಾ ಬೆಳಗ್ಗೆ ದೇವರ ಪೂಜೆ ಮಾಡುತ್ತಾರೆ. ನಾವೆಲ್ಲರೂ ಒಟ್ಟಾಗಿ ಕುಳಿತು ಊಟ ಮಾಡುತ್ತೇವೆ. ನಮ್ಮ ಅಪ್ಪ ನನಗೆ, ಅಣ್ಣನಿಗೆ ಒಂದೇ ತರಹದ ಪುಸ್ತಕ, ಪೆನ್ನು ತರುತ್ತಾರೆ. ಎಲ್ಲರನ್ನೂ ಗೌರವಿಸಬೇಕು, ಕೈಲಾಗದವರಿಗೆ ಸಹಾಯ ಮಾಡಬೇಕು ಎಂದು ಹೇಳಿಕೊಡುತ್ತಾರೆ. ಹಬ್ಬಗಳಲ್ಲಿ ಮಕ್ಕಳಿಗೆ ಮಿಠಾಯಿ ಹಂಚುತ್ತಾರೆ. ನಾವು ಪ್ರತಿ ವರ್ಷ ಊರಿನ ಜಾತ್ರೆಗೆ ಹೋಗುತ್ತೇವೆ.



ರಜಿಯಾ

ಪ್ರತಿನಿತ್ಯ ನಾನು ಮತ್ತು ಅಮ್ಮ ಮನೆಯಲ್ಲಿಯೇ ನಮಾಜು ಮಾಡುತ್ತೇವೆ. ತಮ್ಮ ಮತ್ತು ಅಪ್ಪ ಮಸೀದಿಗೆ ಹೋಗಿ ನಮಾಜು ಮಾಡುತ್ತಾರೆ. ರಂಜ಼ಾನ್ ಹಬ್ಬದಲ್ಲಿ ಬಡವರಿಗೆ ಸಹಾಯ ಮಾಡುತ್ತೇವೆ. ನಮಗೆ ಶುಕ್ರವಾರ ವಿಶೇಷ ದಿನ. ಎಲ್ಲರನ್ನೂ ಒಂದೇ ರೀತಿ ನೋಡಿ ಗೌರವಿಸಬೇಕು ಎಂದು ಅಜ್ಜಿ ಹೇಳುತ್ತಾರೆ. ಅಮ್ಮ ದಿನವೂ ನನಗೆ ಅರಾಬಿಕ್ ಭಾಷೆ ಹೇಳಿಕೊಡುತ್ತಾರೆ.



ಜಾನ್

ನಮಗೆ ಭಾನುವಾರ ಸಂಭ್ರಮದ ದಿನ. ಅಂದು ಮನೆಯ ಎಲ್ಲರೂ ಚರ್ಚಿಗೆ ಹೋಗಿ ಪ್ರಾರ್ಥನೆ ಸಲ್ಲಿಸಿ ಬರುತ್ತೇವೆ. ಅಪ್ಪ ಅಮ್ಮನಿಗೆ ಬಿಡುವು ಇರುವುದರಿಂದ ಎಲ್ಲರೂ ಅಂದು ಜೊತೆಯಲ್ಲಿ ಕುಳಿತು ಊಟ ಮಾಡುತ್ತೇವೆ. ಅಮ್ಮ ಬಿಡುವು ಸಿಕ್ಕಾಗಲೆಲ್ಲಾ ಮನೆಯ ಅಲಂಕಾರ ಮಾಡುತ್ತಾರೆ. ಬೈಬಲ್ ಓದುತ್ತಾರೆ. ಕಥೆ ಹೇಳುತ್ತಾರೆ. ಎಲ್ಲರನ್ನೂ ಸ್ನೇಹದಿಂದ ಕಾಣು, ಜಗಳವಾಡಬೇಡ ಎಂದು ಅಪ್ಪ ಹೇಳುತ್ತಾರೆ.

ಓದಿ–ತಿಳಿ

ವಿವಿಧ ಧರ್ಮದವರ ಆಚರಣೆಗಳು ವಿಭಿನ್ನವಾಗಿರುತ್ತವೆ. ಇವೇ ಧಾರ್ಮಿಕ ಆಚರಣೆಗಳು. ಆಚರಣೆಗಳು ಯಾವುದೇ ಇದ್ದರೂ ಹಿರಿಯರಿಗೆ ಗೌರವ ಕೊಡುವುದು, ಕೈಲಾಗದವರಿಗೆ ಸಹಾಯ ಮಾಡುವುದು, ಎಲ್ಲರಿಗೂ ಸ್ನೇಹ, ಪ್ರೀತಿ ತೋರಿಸುವುದು ಮುಂತಾದವುಗಳನ್ನು ಎಲ್ಲಾ ಧರ್ಮಗಳು ಒತ್ತಿ ಹೇಳುತ್ತವೆ.

© KTBS NOT TO BE REPUBLISHED

ಇದುವರೆಗೂ ನೀನು ಪವಿತ್ರ, ರಜಿಯಾ ಮತ್ತು ಜಾನ್ ಕುಟುಂಬದ ಬಗ್ಗೆ ತಿಳಿದೆ. ಈಗ ನಿನ್ನ ಕುಟುಂಬದ ಆಚರಣೆಗಳ ಬಗ್ಗೆ ಇಲ್ಲಿ ಬರೆ.

ನಿನ್ನ ಮನೆಯಲ್ಲಿ ಪ್ರತಿನಿತ್ಯ ಮಾಡುವ ಆಚರಣೆಗಳು ಯಾವುವು?

_____

_____

_____

ಮನೆಯ ಕೆಲಸಗಳಲ್ಲಿ ಯಾರು, ಯಾರಿಗೆ ನೆರವಾಗುತ್ತಾರೆ?

_____

_____

_____

ನೀನು ಸ್ನೇಹಿತರು ಮತ್ತು ಹಿರಿಯರೊಂದಿಗೆ ಹೇಗೆ ವರ್ತಿಸಬೇಕು ಎಂದು ನಿನ್ನ ಕುಟುಂಬದವರು ಹೇಳುತ್ತಾರೆ?

_____

_____

_____

ನಿನ್ನ ಕುಟುಂಬ ಆಚರಿಸುವ ಹಬ್ಬಗಳನ್ನು ಕುರಿತು ಬರೆ.

_____

_____

_____

_____

_____

_____




ಓದಿ–ತಿಳಿ

ಧರ್ಮ, ಮೌಲ್ಯಗಳು, ಸಾಂಸ್ಕೃತಿಕ ಆಚರಣೆಗಳಿಂದ ಕೂಡಿರುವ ಒಂದು ಸಣ್ಣ ಘಟಕವೇ ಕುಟುಂಬ.

@KTBS NOT TO BE REPUBLISHED

ಈ ಚಿತ್ರ ಸಂಭಾಷಣೆಯನ್ನು ಗಮನಿಸು. ಪ್ರಶ್ನೆಗಳಿಗೆ ಉತ್ತರಿಸು.




ಕುಟುಂಬದವರು ಉನ್ನತ ಶಿಕ್ಷಣ ಕೊಡಿಸಿದ್ದರಿಂದ ಸಮಾಜಕ್ಕೆ ಆದ ಉಪಯೋಗವೇನು?

_____

_____


_____



©KTBS NOT TO BE REPUBLISHED

ಸಮಾಜಕ್ಕೆ ಉಪಯೋಗವಾದ ವೃದ್ಧಾಶ್ರಮ ನಡೆಸಲು ಪ್ರೇರಣೆ ಎಲ್ಲಿಂದ ಬಂತು?

_____



ಅಮ್ಮನ ಗುಣ ಅನುಸರಿಸಿದ್ದರಿಂದ ಪರಿಸರಕ್ಕೆ, ಸಮಾಜಕ್ಕೆ ಆದ ಸಹಾಯವೇನು?

_____

_____

_____



ಓದಿ–ತಿಳಿ

ಕುಟುಂಬದ ಮೌಲ್ಯಗಳು ಬದಲಾದಂತೆ ಸಮಾಜದಲ್ಲಿ ಅನೇಕ ಬದಲಾವಣೆಗಳು ಆಗುತ್ತವೆ.

ಉದಾಹರಣೆಗೆ,

- ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರು ಕಾರ್ಯನಿರ್ವಹಿಸುತ್ತಿರುವುದು.
- ಬಾಲ್ಯ ವಿವಾಹ ಕಡಿಮೆಯಾಗಿರುವುದು.
- ಶಿಕ್ಷಣವು ಮಕ್ಕಳ ಮೂಲಭೂತ ಹಕ್ಕಾಗಿರುವುದು.

ಮಹಾತ್ಮ ಗಾಂಧೀಜಿಯವರ ಜೀವನದ ಬಗ್ಗೆ ಗ್ರಂಥಾಲಯದಲ್ಲಿರುವ ಪುಸ್ತಕವನ್ನು ಓದು. ಹಿರಿಯರಿಂದ, ಶಿಕ್ಷಕರಿಂದ ಕೇಳಿ ತಿಳಿದು ಈ ಪ್ರಶ್ನೆಗಳಿಗೆ ಉತ್ತರಿಸು.

ಗಾಂಧೀಜಿಯವರು ಕುಟುಂಬದಲ್ಲಿ ಕಲಿತ ಗುಣ ಮತ್ತು ಮೌಲ್ಯಗಳಾವುವು?

_____

_____

_____

_____

ಇವು ಸಮಾಜವನ್ನು ಸುಧಾರಣೆ ಮಾಡಲು ಹೇಗೆ ನೆರವಾದವು?

_____

_____

_____

_____

©KTBS NOT TO BE REPUBLISHED

ನೀನು ದೊಡ್ಡವನಾದ/ಳಾದ ಮೇಲೆ ಏನಾಗಬೇಕೆಂದು ಬಯಸುವೆ? ಏಕೆ?

_____

_____

_____

_____

ಇದರಿಂದ ಸಮಾಜಕ್ಕಾಗುವ ಉಪಯೋಗವೇನು? ಬರೆ.

_____

_____

_____

_____

ಕೊಟ್ಟಿರುವ ಕಥೆಯನ್ನು ಓದು. ಕಾರಣವನ್ನು ಬರೆ.



ಓದಿ–ತಿಳಿ

ಎರಡು ಮಕ್ಕಳ ಕಥೆ

ಊರಿನಿಂದ ಬರುತ್ತಿದ್ದ ಚಂದ್ರಣ್ಣ ದಾರಿ ತಪ್ಪಿದನು. ನಡೆದು ದಣಿದ ಅವನು ವಿಶ್ರಾಂತಿ ಪಡೆಯಲು ಒಂದು ಮನೆಯ ಬಳಿಗೆ ಬಂದನು. ಮನೆಯಲ್ಲಿದ್ದ ಬಾಲಕ ಇವನನ್ನು ನೋಡಿ "ಹಿಡಿಯಿರಿ, ಇವನ ಬಳಿ ಇರುವುದನ್ನು ಕಿತ್ತುಕೊಳ್ಳಿ" ಎಂದು ಜೋರಾಗಿ ಕೂಗಿದನು. ಚಂದ್ರಣ್ಣ ಭಯದಿಂದ ಓಡುತ್ತ ರಸ್ತೆಯ ಕೊನೆಯ ಮನೆಗೆ ಬಂದನು. ಅಲ್ಲಿದ್ದ ಬಾಲಕ ಇವನನ್ನು ನೋಡಿ "ಬನ್ನಿ ಕುಳಿತುಕೊಳ್ಳಿ, ವಿರಮಿಸಿ, ನೀರು ಕೊಡಲೆ?" ಎಂದು ಉಪಚರಿಸಿದನು. ನೀರು ಕುಡಿದು ವಿರಮಿಸಿದ ಚಂದ್ರಣ್ಣ ತಾನು ಕಂಡ ಇಬ್ಬರು ಬಾಲಕರ ಬಗ್ಗೆಯೇ ಯೋಚಿಸುತ್ತಾ ತನ್ನ ಮನೆಯ ದಾರಿ ಹಿಡಿದನು.

ಚಂದ್ರಣ್ಣ ಕಂಡ ಮೊದಲ ಬಾಲಕ "ಹಿಡಿಯಿರಿ, ಕಿತ್ತುಕೊಳ್ಳಿ" ಎಂದು ಹೇಳಲು ಕಾರಣವೇನು? ಊಹಿಸಿ ಬರೆ.

_____

_____

_____

@KTBS NOT TO BE REPUBLISHED

ಚಂದ್ರಣ್ಣ ತಾನು ಕಂಡ ಇಬ್ಬರು ಬಾಲಕರಲ್ಲಿ ಯಾರನ್ನು ಮೆಚ್ಚಬಹುದು? ಏಕೆ?

_____

_____

_____

ಚಂದ್ರಣ್ಣ ಕಂಡ ಇಬ್ಬರು ಬಾಲಕರು ಬೇರೆ ಬೇರೆ ರೀತಿ ವರ್ತಿಸಲು ಕಾರಣವೇನು?

_____

_____

_____

_____

© KTBS NOT TO BE REPUBLISHED

ನಿನಗಿದು ಗೊತ್ತೆ?

- ಜೈನಮತದ ಬಹು ಮುಖ್ಯ ತತ್ವವಾದ ಅಹಿಂಸೆಯನ್ನು ಅವರ ಆಹಾರ ಪದ್ಧತಿಯಲ್ಲಿಯೂ ಕಾಣಬಹುದು. ಇವರು ಸಸ್ಯಾಹಾರವನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಾರೆ. ಗೆಡ್ಡೆಗೆಣಸುಗಳನ್ನು ಪಡೆಯಲು ಬೇರನ್ನು ಕೀಳಬೇಕಾಗಿರುವುದರಿಂದ ಸಸ್ಯಗಳು ಸಾಯುತ್ತವೆ ಎಂದು ಈ ಮತಾನುಯಾಯಿಗಳು ಗೆಡ್ಡೆ ಗೆಣಸುಗಳನ್ನು ಬಳಸುವುದಿಲ್ಲ.

- ಬಾಲ್ಯದಲ್ಲಿ ತನ್ನ ಕುಟುಂಬದವರು ಮುಖ್ಯವಾಗಿ ತಂದೆಯವರು ಕಲಿಸಿದ ಶಿಸ್ತು, ಧೈರ್ಯ, ಅರ್ಪಣಾ ಮನೋಭಾವ ಇತ್ಯಾದಿ ಮೌಲ್ಯಗಳೇ ಕೊಡಗಿನ ಕಾರಿಯಪ್ಪ ಭಾರತದ ಮೊತ್ತ ಮೊದಲ ಸೇನಾ ಮುಖ್ಯಸ್ಥರಾಗಿ ಆಯ್ಕೆಯಾಗಲು ನೆರವಾದವು. ಭಾರತೀಯ ಸೇನೆಯ ಅತ್ಯುನ್ನತ ಹುದ್ದೆಯನ್ನು ಅಲಂಕರಿಸಿದ ಇಬ್ಬರೇ ಇಬ್ಬರಲ್ಲಿ ಇವರೇ ಮೊದಲಿಗರು.

- ಪ್ರಖ್ಯಾತ ಸಾಹಿತಿ ಡಿ.ವಿ. ಗುಂಡಪ್ಪನವರ ಪುತ್ರ ಐ.ಜಿ.ಎಲ್ ಸ್ವಾಮಿಯವರು ಹೆಸರಾಂತ ಸಸ್ಯಶಾಸ್ತ್ರಜ್ಞರು. ತಂದೆಯಿಂದ ಬಳುವಳಿಯಾಗಿ ಪಡೆದ ಸಾಹಿತ್ಯ ಕೌಶಲ್ಯವನ್ನು ಸಸ್ಯಶಾಸ್ತ್ರಕ್ಕೆ ಅಳವಡಿಸಿಕೊಂಡರು. ಇವರು ಬರೆದ **ಹಸಿರುಹೊನ್ನು** ಗ್ರಂಥ ಇಂದಿಗೂ ಸಸ್ಯ ವಿಜ್ಞಾನದ ವಿದ್ಯಾರ್ಥಿಗಳಿಗೆ ಅತ್ಯಮೂಲ್ಯ ಮಾಹಿತಿಯನ್ನೊದಗಿಸುತ್ತದೆ. ಸಾವಿರಾರು ವಿದ್ಯಾರ್ಥಿಗಳು ಇದರಿಂದ ಪ್ರಯೋಜನವನ್ನು ಪಡೆದಿದ್ದಾರೆ, ಪಡೆಯುತ್ತಿದ್ದಾರೆ.

✳✳✳

ಪಾಠ – 18

ಪ್ರತಿಯೊಬ್ಬರೂ ವಿಶಿಷ್ಟ

D2A1V1

ಈ ಪಾಠವನ್ನು ಕಲಿತ ನಂತರ ನೀನು,

- ಕುಟುಂಬದ ಸದಸ್ಯರ ಮತ್ತು ಸ್ನೇಹಿತರ ಗುಣಗಳು ಮತ್ತು ಕೌಶಲ್ಯಗಳನ್ನು ಗುರುತಿಸುವೆ.
- ಪ್ರತಿ ವ್ಯಕ್ತಿಯೂ ವಿಶಿಷ್ಟ ಎಂಬುದನ್ನು ಗುರುತಿಸುವೆ.
- ವಿಶೇಷ ಅವಶ್ಯಕತೆಯುಳ್ಳವರ ನಡುವಿನ ಸಂವಹನ ವಿಧಾನಗಳನ್ನು ಅರಿಯುವೆ ಹಾಗೂ ವಿಕಲಚೇತನರ ಬಗ್ಗೆ ಸಂವೇದನಾಶೀಲತೆಯಿಂದ ಪ್ರತಿಕ್ರಿಯಿಸುವೆ.

ಲತಾಳ ಶಾಲೆಯಲ್ಲಿ ಮುಂದಿನ ವಾರ **ಪ್ರತಿಭಾ ಕಾರಂಜಿ** ಕಾರ್ಯಕ್ರಮ. ಅಂದು ಶಾಲಾ ಶಿಕ್ಷಕರು ಮಕ್ಕಳಿಗಾಗಿ ಹಲವು ಸ್ಪರ್ಧೆಗಳನ್ನು ನಡೆಸಬೇಕೆಂದು ನಿರ್ಧರಿಸಿದರು. ಸ್ಪರ್ಧೆಗಳ ಪಟ್ಟಿಯನ್ನು ಶಾಲೆಯ ಸೂಚನಾ ಫಲಕದಲ್ಲಿ ಹಾಕಲಾಯಿತು. ಶಾಲೆ ಬಿಟ್ಟ ಮೇಲೆ ಲತಾ ಮತ್ತು ಗೆಳೆಯರು ಸೇರಿ ಯಾವ ಸ್ಪರ್ಧೆಯಲ್ಲಿ ಭಾಗವಹಿಸಬೇಕು ಎಂಬ ಚರ್ಚೆಯನ್ನು ಪ್ರಾರಂಭಿಸಿದರು.

ಲತಾ : ರಾಜು, ನೀನು ತುಂಬಾ ಚೆನ್ನಾಗಿ ಚಿತ್ರವನ್ನು ಬರೆಯುವೆ. ಚಿತ್ರಕಲಾ ಸ್ಪರ್ಧೆಗೆ ನಿನ್ನ ಹೆಸರು ಕೊಡು.

ರಾಜು : ಲತಾ, ನಿನ್ನ ಕಂಠ ತುಂಬಾ ಮಧುರವಾಗಿದೆ. ನೀನು ಹಾಡುವ ಸ್ಪರ್ಧೆಗೆ ಏಕೆ ಸೇರಬಾರದು?



@KTBS NOT TO BE REPUBLISHED

ಮಹಮದ್ : ರೀಟಾ, ನೀನು ಮಣ್ಣಿನಿಂದ ಗೊಂಬೆಗಳನ್ನು ಚೆನ್ನಾಗಿ ಮಾಡುವೆ. ಜೇಡಿಮಣ್ಣಿನ ಮಾದರಿ ತಯಾರಿಕೆಗೆ ನೀನೇ ಸರಿ.

ರೀಟಾ : ಮಹಮದ್ ನಾಟಕವನ್ನು ಚೆನ್ನಾಗಿ ಮಾಡುತ್ತಾನೆ. ಲತಾ, ಅವನ ಹೆಸರನ್ನು ಏಕೆ ಕೊಡಬಾರದು?

ಹೀಗೆ ಚರ್ಚಿಸಿ ಯಾರು ಯಾವ ಸ್ಪರ್ಧೆಗೆ ಸೇರಬೇಕು ಎಂಬುದನ್ನು ತೀರ್ಮಾನಿಸಿದರು.

ಈ ಪ್ರಶ್ನೆಗಳಿಗೆ ಉತ್ತರಿಸು.

ಲತಾ ಮತ್ತು ರಾಜು ಯಾವ ಸ್ಪರ್ಧೆಗಳಿಗೆ ಸೇರಬೇಕೆಂದು ಯೋಚಿಸಿದರು?

_____

_____

ಮಹಮದ್ ಯಾವ ಸ್ಪರ್ಧೆಗೆ ಸೇರಿದರೆ ಒಳ್ಳೆಯದು ಎಂದು ರೀಟಾ ಹೇಳಿದಳು?

_____

_____

ರೀಟಾ ಮಣ್ಣಿನ ಮಾದರಿ ಸ್ಪರ್ಧೆಗೆ ಏಕೆ ಸೇರಬೇಕೆಂದು ಮಹಮದ್ ಹೇಳಿದನು?

_____

_____

ನಿನ್ನ ಶಾಲೆಯಲ್ಲಿ **ಪ್ರತಿಭಾ ಕಾರಂಜಿ** ನಡೆದರೆ ನೀನು ಯಾವ ಸ್ಪರ್ಧೆಯಲ್ಲಿ ಭಾಗವಹಿಸುವೆ? ಏಕೆ?

_____

_____

_____

ನಿನ್ನಲ್ಲಿ ಇನ್ನೇನು ವಿಶೇಷ ಗುಣಗಳಿವೆ? ಬರೆ.

_____ _____

_____ _____

_____ _____

@KTBS NOT TO BE REPUBLISHED

ನಿನ್ನ ಗೆಳೆಯರಲ್ಲಿ ಇರುವ ವಿಶೇಷ ಗುಣಗಳನ್ನು ಪಟ್ಟಿ ಮಾಡು.

	ಗೆಳೆಯರ ಹೆಸರು	ವಿಶೇಷ ಗುಣ
ಉದಾಹರಣೆ:	ರಾಮು	ಚೆನ್ನಾಗಿ ಅಭಿನಯಿಸುತ್ತಾನೆ

ನಿನ್ನ ಕುಟುಂಬದ ಸದಸ್ಯರ ಹೆಸರನ್ನು ಬರೆ. ಅವರಲ್ಲಿ ನೀನು ಮೆಚ್ಚುವ ಗುಣವನ್ನು ಬರೆ.

ಸದಸ್ಯರ ಹೆಸರು	ಮೆಚ್ಚುವ ಗುಣ

@KTBS NOT TO BE REPUBLISHED

ಬಾಲ್ಯದಲ್ಲೇ ಕೌಶಲ್ಯ ಗುರುತಿಸಿ, ಅದಕ್ಕೆ ಸರಿಯಾದ ಅವಕಾಶ ಮತ್ತು ಪ್ರೋತ್ಸಾಹ ನೀಡಿದ್ದರಿಂದ ಆಯಾ ಕ್ಷೇತ್ರದಲ್ಲಿ ಹೆಸರುವಾಸಿಯಾದ ಹಲವು ಮಹನೀಯರು ಮತ್ತು ಮಹಿಳೆಯರು ಕರ್ನಾಟಕದ ರಾಜ್ಯದಲ್ಲಿದ್ದಾರೆ. ಇಲ್ಲಿ ನಾಲ್ವರ ಪರಿಚಯವನ್ನು ಕೊಟ್ಟಿದೆ.


ಓದಿ–ತಿಳಿ



ಡಾ॥ ರಾಜ್‌ಕುಮಾರ್

ತಮ್ಮ ಅಭಿನಯ ಮತ್ತು ಗಾಯನ ಕೌಶಲ್ಯದಿಂದ ಡಾ॥ ರಾಜ್‌ಕುಮಾರ್‌ರವರು ಕನ್ನಡ ಚಿತ್ರರಂಗದಲ್ಲಿ ಪ್ರಸಿದ್ಧಿಯಾಗಿದ್ದಾರೆ. 200ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ ಈ ಮೇರು ನಟ ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ. ಕಲಾ ಕ್ಷೇತ್ರದಲ್ಲಿ ಪ್ರಸಿದ್ಧರಾದ ಡಾ॥ ರಾಜ್‌ಕುಮಾರ್‌ಗೆ ಅಭಿನಯ ತಂದೆಯಿಂದ ಬಂದ ಬಳುವಳಿ. ಇವರು ತಮ್ಮ 8ನೇ ವಯಸ್ಸಿನಲ್ಲಿಯೇ ನಾಟಕಗಳಲ್ಲಿ ಬಾಲನಟನಾಗಿ ಅಭಿನಯಿಸಿದ್ದರು.

ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ (ಕುವೆಂಪು)



ಕುಪ್ಪಳಿಯಲ್ಲಿ ಜನಿಸಿದ ಇವರು ರಾಷ್ಟ್ರಕವಿ ಎಂದೇ ಪ್ರಖ್ಯಾತರು. ಶಾಲೆಯಲ್ಲಿ ಪ್ರತಿನಿತ್ಯ ಹೇಳುವ **ಜಯ್ ಭಾರತ ಜನನಿಯ ತನುಜಾತೆ** ನಾಡಗೀತೆಯನ್ನು ಬರೆದವರು ಕುವೆಂಪು. ತಮ್ಮ ಬರವಣಿಗೆಯ ಕೌಶಲ್ಯದಿಂದ ಜ್ಞಾನಪೀಠ ಪ್ರಶಸ್ತಿ ಪಡೆದ ಮೊದಲ ಕನ್ನಡ ಕವಿಯಾದ ಇವರು ಮಕ್ಕಳಿಗಾಗಿ ಕಿಂದರಿ ಜೋಗಿ, ನನ್ನ ಗೋಪಾಲ, ಅಮಲನ ಕಥೆ ಮುಂತಾದವುಗಳನ್ನು ಬರೆದಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದ ಕುವೆಂಪು ಅವರಿಗೆ ಚಿಕ್ಕಂದಿನಿಂದಲೂ ಕಥೆ, ಕವನ, ಪುಸ್ತಕ ಓದುವ, ಬರೆಯುವ ಅಭ್ಯಾಸ ಇತ್ತು.

ಕಿತ್ತೂರು ರಾಣಿ ಚೆನ್ನಮ್ಮ



ಬೆಳಗಾವಿಯ ಕಾಕತಿಯಲ್ಲಿ ಜನಿಸಿದ ಚೆನ್ನಮ್ಮ ಬಾಲ್ಯದಲ್ಲಿಯೇ ತುಂಬಾ ಧೈರ್ಯಶಾಲಿ. ಎಳೆ ವಯಸ್ಸಿನಲ್ಲಿಯೇ ಕುದುರೆ ಸವಾರಿ, ಕತ್ತಿವರಸೆ ಮತ್ತು ಬಿಲ್ಲು ವಿದ್ಯೆಗಳಲ್ಲಿ ಈಕೆಗೆ ತುಂಬಾ ಆಸಕ್ತಿ. ಹೀಗಾಗಿ ಬಾಲ್ಯದಲ್ಲಿಯೇ ಯುದ್ಧ ಕೌಶಲ್ಯ ರೂಢಿಸಿಕೊಂಡ ಈಕೆ ಕಿತ್ತೂರಿನ ದೇಸಾಯಿ ಮಲ್ಲಸರ್ಜನನ್ನು ಮದುವೆಯಾಗಿ ಕಿತ್ತೂರಿನ ರಾಣಿಯಾದರು. ಮಲ್ಲಸರ್ಜನ ಕಾಲಾನಂತರ ಬ್ರಿಟಿಷರೊಡನೆ ಸಾಹಸದಿಂದ ಹೋರಾಡಿ ವೀರ ಮಹಿಳೆ ಎನಿಸಿಕೊಂಡರು.

ಗಂಗೂಬಾಯಿ ಹಾನಗಲ್



ಧಾರವಾಡದಲ್ಲಿ ಜನಿಸಿದ ಗಂಗೂಬಾಯಿಯವರು ತಮ್ಮ ಗಾಯನ ಕೌಶಲ್ಯದಿಂದ ಸಂಗೀತ ಕಲೆಯಲ್ಲಿ ಉತ್ತುಂಗಕ್ಕೇರಿ ಭಾರತದಲ್ಲೇ ಮನೆಮಾತಾಗಿದ್ದರು. ಇವರಿಗೆ 13 ವರ್ಷ ವಯಸ್ಸಾದಾಗ ಇವರ ತಂದೆ ತಾಯಿ ಇವರ ಗಾನ ಕೌಶಲ್ಯ ಗುರುತಿಸಿ ಸಂಗೀತ ಶಾಲೆಗೆ ಸೇರಿಸಿದರು. ಕರ್ನಾಟಕ ಸಂಗೀತ ಮತ್ತು ಹಿಂದೂಸ್ತಾನಿ ಸಂಗೀತ ಕಲಿತ ಇವರು ಭಾರತ ದೇಶದ ಅನೇಕ ಕಡೆ ಸಂಗೀತ ಕಚೇರಿ ನಡೆಸಿದರು. ಅನೇಕ ಪ್ರಶಸ್ತಿಗಳನ್ನು ಪಡೆದರು. ಆಕಾಶವಾಣಿಯಲ್ಲಿ ಅನೇಕ ಸಂಗೀತ ಕಾರ್ಯಕ್ರಮಗಳನ್ನು ಇವರು ನೀಡಿದ್ದಾರೆ. ಹಿಂದೂಸ್ತಾನಿ ಗಾಯನದಲ್ಲಿ ಇವರಿಗೆ ಅತ್ಯುನ್ನತ ಸ್ಥಾನವಿದೆ.

© KTBS NOT TO BE REPUBLISHED

ತಮ್ಮ ವಿಶಿಷ್ಟ ಗುಣ ಮತ್ತು ಕೌಶಲ್ಯದಿಂದ ಕನ್ನಡ ನಾಡಿನ ಅನೇಕರು ಪ್ರಸಿದ್ಧರಾಗಿದ್ದಾರೆ. ಇಂತಹ ಪ್ರಸಿದ್ಧ ವ್ಯಕ್ತಿಗಳ ಬಗ್ಗೆ ಶಾಲೆಯಲ್ಲಿ ಅಥವಾ ಗ್ರಂಥಾಲಯದಲ್ಲಿ ಸಿಗುವ ಪುಸ್ತಕಗಳನ್ನು ಓದು.

ನಿನ್ನ ಊರಿನಲ್ಲಿ ತಮ್ಮ ವಿಶಿಷ್ಟ ಗುಣ ಅಥವಾ ಕೌಶಲ್ಯದಿಂದ ಹೆಸರು ಮಾಡಿದ ವ್ಯಕ್ತಿಗಳ ಹೆಸರನ್ನು ಪಟ್ಟಿ ಮಾಡು. ಈ ವ್ಯಕ್ತಿಗಳ ವಿಶಿಷ್ಟ ಗುಣ ಅಥವಾ ಕೌಶಲ್ಯವನ್ನು ಹಿರಿಯರ ಸಹಾಯದಿಂದ ತಿಳಿದು ಬರೆ.

ಪ್ರಸಿದ್ಧ ವ್ಯಕ್ತಿಗಳು	ವಿಶೇಷ ಗುಣ / ಕೌಶಲ್ಯ

@KTBS NOT TO BE REPUBLISHED

ಕರ್ನಾಟಕದಲ್ಲಿ ಪ್ರಸಿದ್ಧರಾದ ಕವಿಗಳು, ಕಲಾಕಾರರು, ವಿಜ್ಞಾನಿಗಳು, ಗಾಯಕರು ಮತ್ತು ಸಮಾಜ ಸುಧಾರಕರ ಬಗ್ಗೆ ಹಿರಿಯರಿಂದ ಅಥವಾ ಶಿಕ್ಷಕರಿಂದ ತಿಳಿದುಕೊ. ಇವರನ್ನು ಕುರಿತ ಪುಸ್ತಕಗಳನ್ನು ಶಾಲಾ ಗ್ರಂಥಾಲಯದಿಂದ ಪಡೆದು ಓದು. ನಿನಗೆ ಅತ್ಯಂತ ಪ್ರಿಯವಾದ ಒಬ್ಬ ಪ್ರಸಿದ್ಧ ವ್ಯಕ್ತಿಯನ್ನು ಕುರಿತು ನಾಲ್ಕು ಸಾಲುಗಳನ್ನು ಬರೆ. ಇವರಿಗೆ ಬಾಲ್ಯದಲ್ಲಿ ದೊರೆತ ಪ್ರೋತ್ಸಾಹ, ಸಹಕಾರಗಳನ್ನು ಗುರುತಿಸು.

_____

_____

_____


_____

ಕೆಲವರು ದೈಹಿಕ ತೊಂದರೆಯಿದ್ದರೂ ತಮ್ಮ ವಿಶಿಷ್ಟ ಗುಣ ಮತ್ತು ಕೌಶಲ್ಯವನ್ನು ಛಲದಿಂದ ಮುಂದುವರೆಸಿ ವಿಶ್ವದಲ್ಲೇ ಹೆಸರು ಗಳಿಸಿದ್ದಾರೆ.

ಅಂತಹವರಲ್ಲಿ ಒಬ್ಬರನ್ನು ಕುರಿತು ಇಲ್ಲಿ ಹೇಳಿದೆ.

ಓದಿ–ತಿಳಿ

ಥಾಮಸ್ ಆಲ್ವಾ ಎಡಿಸನ್



ಬಾಲಕ ಎಡಿಸನ್ ಶಾಲೆಯಲ್ಲಿ ಗಣಿತದಲ್ಲಿ ತುಂಬಾ ಹಿಂದೆ. ಪದಗಳನ್ನು ಉಚ್ಚರಿಸಲು ತುಂಬಾ ಕಷ್ಟಪಡುತ್ತಿದ್ದ. ಈ ಬಾಲಕ ಶಾಲೆಗೆ ಸೇರಿದ ಮೂರು ತಿಂಗಳಲ್ಲಿ ಜ್ವರ ಬಂದು, ಕಿವಿಯ ಸೋಂಕಿನಿಂದ ಕೇಳುವ ಸಾಮರ್ಥ್ಯ ಕಳೆದುಕೊಂಡು ಕಿವುಡನಾದ. ಇದರಿಂದ ಶಾಲೆಗೆ ಹೋಗುವುದು ನಿಂತಿತು. ತಾಯಿ ಈ ಬಾಲಕನಿಗೆ ಮನೆಯಲ್ಲಿಯೇ ಶಿಕ್ಷಣ ನೀಡಿದಳು. ಈ ಬಾಲಕ ಮುಂದೆ ಬೆಳೆದು ದೊಡ್ಡವನಾಗಿ ಅನೇಕ ಸಾಧನಗಳನ್ನು ಕಂಡುಹಿಡಿದ. ನಮ್ಮ ಮನೆಯಲ್ಲಿ ಉರಿಯುವ ಬಲ್ಬ್ ನಂತಹ ಮಹತ್ವಪೂರ್ಣ ಸಾಧನಗಳನ್ನು ಕಂಡುಹಿಡಿದ ಮಹಾನ್ ವ್ಯಕ್ತಿಯೇ ಥಾಮಸ್ ಆಲ್ವಾ ಎಡಿಸನ್.

ಎಡಿಸನ್‌ನ ಜೀವನದಿಂದ ನೀನು ಏನನ್ನು ತಿಳಿದೆ ಎಂದು ಬರೆ.

_____

_____

_____

ಹಿಂದಿನ ತರಗತಿಯಲ್ಲಿ ನೀನು ಕೇಳುವ ಮತ್ತು ಮಾತನಾಡುವ ತೊಂದರೆ ಇರುವವರು ಸನ್ನೆಗಳ ಮೂಲಕ ಹೇಗೆ ಮಾತನಾಡುತ್ತಾರೆ ಎಂದು ತಿಳಿದಿರುವೆ. ಇದಲ್ಲದೆ ಮಾತನಾಡಲು ಸನ್ನೆ ಅಕ್ಷರವನ್ನೂ ಬಳಸುತ್ತಾರೆ ಎಂಬುದು ನಿನಗೆ ಗೊತ್ತೆ?

ಇದನ್ನು ಗಮನಿಸು.

a 

b 



c 

d 

ಬೆರಳನ್ನು ಉಪಯೋಗಿಸಿ ಈ ಅಕ್ಷರಗಳನ್ನು ಹೇಗೆ ತಿಳಿಸುತ್ತಾರೆ ನೋಡು.

@KTBS NOT TO BE REPUBLISHED

ಇದರೊಂದಿಗೆ ಕೈ ಮತ್ತು ಬೆರಳಿನ ಚಲನೆಯಿಂದ ಕೆಲವು ಸನ್ನೆಗಳನ್ನು ಮಾಡಿ ತಿಳಿಸುತ್ತಾರೆ. ಉದಾಹರಣೆಗಾಗಿ ಇಲ್ಲಿ ಕೆಲವು ಸನ್ನೆ ಸಂಕೇತಗಳನ್ನು ಮತ್ತು ಅವುಗಳ ಅರ್ಥವನ್ನು ನೀಡಿದೆ. ಅವುಗಳನ್ನು ತಿಳಿ.

	ಕೋಪ
	ಬೇರೊಂದು
	ನಾನೊಬ್ಬನೆ
	ಎದ್ದೇಳು
	ಆಶ್ಚರ್ಯ

@KTBS NOT TO BE REPUBLISHED



ಓದಿ–ತಿಳಿ

ದೃಷ್ಟಿ ವಿಕಲಚೇತನರು ಬ್ರೈಲ್ ಲಿಪಿಯನ್ನು, ವಾಕ್ ಮತ್ತು ಶ್ರವಣ ವಿಕಲಚೇತನರು ಸಂಕೇತಾಕ್ಷರವನ್ನು ಬಳಸಿ ಬೇರೆಯವರೊಂದಿಗೆ ಸಂವಹನ ನಡೆಸುತ್ತಾರೆ. ಇವರೂ ನಮ್ಮವರೆ, ನಮ್ಮಂತೆಯೆ. ಆದರೆ ಇವರಿಗೆ ಕೆಲವು ವಿಶೇಷ ಶಿಕ್ಷಣದ ಅಗತ್ಯವಿದೆ ಎಂಬುದು ನಿನಗೆ ತಿಳಿದಿರಲಿ. ಇವರೂ ನಮ್ಮಂತೆಯೆ ಎಂದು ಭಾವಿಸಬೇಕು.

ನಿಮ್ಮ ಊರಿನಲ್ಲಿ ದೈಹಿಕ ತೊಂದರೆಯಿದ್ದರೂ ಸಾಧನೆ ಮಾಡಿದ ವ್ಯಕ್ತಿಗಳ ಬಗ್ಗೆ ಹಿರಿಯರಿಂದ ಕೇಳಿ ತಿಳಿ.

ನಿನಗಿದು ಗೊತ್ತೇ?



ಬಾಲ್ಯದಲ್ಲೇ ಅಳವಡಿಸಿಕೊಂಡ ಕೌಶಲ್ಯಗಳು ಮತ್ತು ಮೌಲ್ಯಗಳಿಂದ ಸರ್. ಎಂ. ವಿಶ್ವೇಶ್ವರಯ್ಯನವರು ಭಾರತದ ಅತ್ಯುತ್ತಮ ತಂತ್ರಜ್ಞಾನಿ ಎನಿಸಿಕೊಂಡರು. ತಮ್ಮ ತಂತ್ರಜ್ಞಾನ ಕೌಶಲ್ಯದಿಂದ ಅಣೆಕಟ್ಟುಗಳು, ಕೈಗಾರಿಕೆಗಳು, ರಸ್ತೆಗಳು ಮುಂತಾದವುಗಳನ್ನು ನಿರ್ಮಿಸಿ, ಸಾವಿರಾರು ಜನರಿಗೆ ಸೇವೆ ಸಲ್ಲಿಸಿದ್ದಾರೆ. ಆದ್ದರಿಂದ ಇವರಿಗೆ ಭಾರತ ಸರ್ಕಾರವು 1955ರಲ್ಲಿ ಅತಿಶ್ರೇಷ್ಠ ಗೌರವವಾದ **ಭಾರತರತ್ನ** ಎಂಬ ಬಿರುದನ್ನು ನೀಡಿ ಗೌರವಿಸಿದೆ.



ಮದರ್ ಥೆರೆಸಾರವರು ತಮ್ಮ ಜೀವನಪೂರ್ತಿ ರೋಗಿಗಳಿಗೆ, ಕೈಲಾಗದವರಿಗೆ, ಅನಾಥರಿಗೆ ಸೇವೆ ಮಾಡಿದ್ದಾರೆ. ಈ ಸೇವೆಗಾಗಿಯೇ ಅವರಿಗೆ **ನೊಬೆಲ್ ಪ್ರಶಸ್ತಿ** ದೊರೆತಿದೆ.



ಕನ್ನಡ ಚಿತ್ರನಟ ಬಾಲಕೃಷ್ಣರವರಿಗೆ ಕಿವಿ ಕೇಳದೇ ಇದ್ದರೂ ಅದ್ಭುತವಾಗಿ ನಟಿಸುತ್ತಿದ್ದರು.

©KTBS NOT TO BE REPUBLISHED

✳ ✳ ✳

ಪಾಠ – 19


ವೃತ್ತಿ ವಿಶೇಷ

A2C6J4

ಈ ಪಾಠವನ್ನು ಕಲಿತ ನಂತರ ನೀನು,

- ಸ್ಥಳೀಯ ಹಾಗೂ ವಿವಿಧ ಪ್ರದೇಶಗಳಲ್ಲಿನ ವಿವಿಧ ಕಸುಬುದಾರರನ್ನು ಗುರುತಿಸುವೆ.
- ದುಡಿಯುವ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸುವೆ.

ಇದು ಸೋಮುವಿನ ಮನೆ. ಇವನ ಮನೆಯಲ್ಲಿ ದಿನನಿತ್ಯ ಬಳಸುವ ಹಲವಾರು ವಸ್ತುಗಳಿವೆ. ಇವುಗಳನ್ನು ಯಾವುದರಿಂದ ತಯಾರಿಸಲಾಗಿದೆ? ಇವುಗಳನ್ನು ಯಾರು ತಯಾರಿಸುತ್ತಾರೆ? ಹಿರಿಯರಿಂದ ತಿಳಿದು ಹೇಳು.



ರಾಮನಹಳ್ಳಿ ಒಂದು ಪುಟ್ಟ ಗ್ರಾಮ. ಈ ಗ್ರಾಮದ ಜನರು ಮಾಡುವ ವಿವಿಧ ಕೆಲಸಗಳನ್ನು ಇಲ್ಲಿ ತೋರಿಸಿದೆ. ಇವರು ಯಾವ ಕೆಲಸ ಅಥವಾ ಕಸುಬು ಮಾಡುತ್ತಿದ್ದಾರೆ ಎಂದು ಖಾಲಿ ಬಿಟ್ಟ ಜಾಗದಲ್ಲಿ ಬರೆ.



©KTBS NOT TO BE REPUBLISHED




ಕೆಲಸಗಳು

1. _____
2. _____
3. _____
4. _____
5. _____
6. _____
7. _____
8. _____
9. _____
10. _____


ವಿವಿಧ ಕೆಲಸಗಳನ್ನು ಮಾಡುವ ವ್ಯಕ್ತಿಗಳ ಚಿತ್ರಗಳನ್ನು ಇಲ್ಲಿ ನೀಡಿದೆ. ಇವರು ಯಾರು? ಇವರು ಯಾವ ಕೆಲಸಗಳನ್ನು ಮಾಡುತ್ತಾರೆ? ಎಂಬುದನ್ನು ಬರೆ.



_____ _____ _____ _____

_____ _____ _____ _____








_____ _____ _____ _____

_____ _____ _____ _____

NOT TO BE REPUBLISHED @KTBS




_____ _____ _____ _____

_____ _____ _____ _____

ಇವರು ನಿನ್ನ ಊರಿನಲ್ಲಿದ್ದಾರೆಯೆ? ನಿನ್ನ ಊರಿನಲ್ಲಿ ಇರುವವರಿಗೆ (✓) ಗುರುತು ಹಾಕು. ಇವನ್ನು ಬಿಟ್ಟು ನಿನ್ನ ಊರಿನಲ್ಲಿ ಇತರ ಕಸುಬುಗಳಲ್ಲಿ ತೊಡಗಿರುವವರನ್ನು ಗುರುತಿಸಿ ಬರೆ.

_____ _____ _____ _____

_____ _____ _____ _____


_____ _____ _____ _____


ಇವರು ಮಾಡುವ ಕೆಲಸವನ್ನು ಅಭಿನಯ ಮಾಡಿ ತೋರಿಸು.

1. ರೈತ
2. ಬಡಗಿ
3. ಶಿಕ್ಷಕ
4. ವೈದ್ಯ
5. ಅಂಚೆಯವನು
6. ನೃತ್ಯಗಾರ್ತಿ
7. ದರ್ಜಿ
8. ಗಾಯಕಿ
9. ಹೂ ಮಾರುವವಳು
10. ವಾಹನ ಚಾಲಕ

@KTBS NOT TO BE REPUBLISHED

ಈ ಚಿತ್ರಕಥೆ ಓದು.





NOT TO BE REPUBLISHED

ಈ ಪ್ರಶ್ನೆಗಳಿಗೆ ಉತ್ತರಿಸು.

ಆನೆ ಯಾವ ಯಾವ ಕಸುಬಿನವರ ಬಳಿ ಹೋಯಿತು?

_____

_____

ಆನೆ ಯಾವ ಯಾವ ವಸ್ತುಗಳನ್ನು ಪಡೆಯಿತು?

_____

_____

ಕುಂಬಾರನಿಗೆ ಆನೆ ಹೇಗೆ ನೆರವಾಯಿತು?

_____

_____



ಓದಿ–ತಿಳಿ

ಒಂದು ಕಸುಬಿನವರು ಮತ್ತೊಂದು ಕಸುಬಿನವರನ್ನು ಅವಲಂಬಿಸುತ್ತಾರೆ.

ಈ ಚಿತ್ರಗಳನ್ನು ಗಮನಿಸು. ನೀನು ಹಾಕುವ ಬಟ್ಟೆ ಹೇಗೆ ತಯಾರಾಗಿದೆ ಎಂದು ತಿಳಿ.



ಯಾರ ಯಾರ ಸಹಕಾರದಿಂದ ನೀನು ಹಾಕುವ ಬಟ್ಟೆ ಸಿದ್ಧವಾಗಿದೆ ಎಂಬುದನ್ನು ಚಿತ್ರದ ಕೆಳಗೆ ಕೊಟ್ಟಿರುವ ಚೌಕದಲ್ಲಿ ಬರೆ.

© KTBS NOT TO BE REPUBLISHED



ಓದಿ–ತಿಳಿ

ಸಿದ್ಧವಾದ ವಸ್ತುಗಳು ನಮಗೆ ಅಂಗಡಿಗಳಲ್ಲಿ ದೊರಕಿದರೂ ಅದರ ತಯಾರಿಕೆಯ ಹಿಂದೆ ಅನೇಕ ಕಸುಬುದಾರರ ಶ್ರಮವಿರುತ್ತದೆ.

ದೊಡ್ಡವರಲ್ಲದೆ ಹಲವು ಮಕ್ಕಳು ಕೂಡ ವಿವಿಧ ಕಸುಬುಗಳನ್ನು ಮಾಡುತ್ತಾರೆ ಎಂದು ನಿನಗೆ ಗೊತ್ತು.

ಹಿಂದಿನ ತರಗತಿಯಲ್ಲಿ ದುಡಿಮೆಯಲ್ಲಿ ತೊಡಗಿರುವ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿದಿರುವೆ.

ನೀನು ನೋಡಿರುವ ದುಡಿಮೆಯಲ್ಲಿ ತೊಡಗಿರುವ ಒಂದು ಮಗುವನ್ನು ಕುರಿತು ಬರೆ. ಅವನು ಅಥವಾ ಅವಳು ಎದುರಿಸುವ ಸಮಸ್ಯೆಗಳಲ್ಲಿ ನಾಲ್ಕನ್ನು ಬರೆ.

_____

_____

_____

_____

@KTBS NOT TO BE REPUBLISHED

ನಿನಗಿದು ಗೊತ್ತೆ?

- ದೈನಂದಿನ ಜೀವನಕ್ಕೆ ಬೇಕಾಗುವ ವಸ್ತುಗಳನ್ನು ತಯಾರಿಸುವುದರಿಂದ ಹಿಡಿದು ಮನೆಯ ಅಲಂಕಾರಿಕ ವಸ್ತುಗಳ ತಯಾರಿಕೆವರೆಗೂ ಅನೇಕ ಕಸುಬುದಾರರು ಇದ್ದಾರೆ. ಇವುಗಳಲ್ಲಿ ಕುಶಲಕಲೆಯೂ ಒಂದು ಕಸುಬು.
- ಕರ್ನಾಟಕದ ಕರ ಕುಶಲಕಲೆಗಳಲ್ಲಿ ಗಂಧದ ಮರದ ಕೆತ್ತನೆ ಸುಪ್ರಸಿದ್ಧವಾಗಿದೆ.
- ಮರದ ಗೊಂಬೆ, ಆಟಿಕೆಗಳ ತಯಾರಿಕೆಯಲ್ಲಿ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯ ಚನ್ನಪಟ್ಟಣ ಹೆಸರುವಾಸಿಯಾಗಿದೆ.
- 14 ವರ್ಷದ ಒಳಗಿನ ವಯೋಮಾನದ ಮಕ್ಕಳನ್ನು ದುಡಿಮೆಯಲ್ಲಿ ತೊಡಗಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧ. ಈ ವಯಸ್ಸಿನ ಮಕ್ಕಳು ಕಡ್ಡಾಯವಾಗಿ ಶಿಕ್ಷಣ ಪಡೆಯುವಂತೆ ಮಾಡುವುದು ಎಲ್ಲರ ಜವಾಬ್ದಾರಿ.
- ದುಡಿಮೆಯಲ್ಲಿ ತೊಡಗಿರುವ 6–14 ವರ್ಷದ ಮಕ್ಕಳ ಶಿಕ್ಷಣ ಮತ್ತು ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರವು ವಿಶೇಷವಾದ ವಸತಿ ಶಾಲೆಗಳು ಹಾಗೂ ಪುನರ್ವಸತಿ ಕೇಂದ್ರಗಳನ್ನು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಪ್ರಾರಂಭಿಸಿದೆ.

✳ ✳ ✳

ಪಾಠ – 20

ಹಬ್ಬ–ಹರುಷ

L9A8I1

ಈ ಪಾಠವನ್ನು ಕಲಿತ ನಂತರ ನೀನು,

- ಶಾಲೆಯ ಸಮಾರಂಭಗಳು ಮತ್ತು ರಾಷ್ಟ್ರೀಯ ಹಬ್ಬಗಳಲ್ಲಿ ಭಾಗವಹಿಸುವೆ.
- ರಾಷ್ಟ್ರೀಯ ಹಬ್ಬಗಳ ಮಹತ್ವ ಅರಿಯುವೆ.
- ರಾಷ್ಟ್ರೀಯ ಸಂಕೇತಗಳನ್ನು ಗುರುತಿಸುವೆ ಮತ್ತು ಗೌರವಿಸುವೆ.

ಅಮ್ಮನೊಂದಿಗೆ ಆಗಸದಲ್ಲಿ ಹಾರುತ್ತಿದ್ದ ಪುಟ್ಟ ಬೆಳ್ಳಕ್ಕಿ ಶಾಲಾ ಬಯಲಿನಲ್ಲಿ ನಡೆಯುತ್ತಿರುವ ಸಂಭ್ರಮ ನೋಡಿತು.



@KTBS NOT TO BE REPUBLISHED








ಓದಿ–ತಿಳಿ

ಸಾಮಾನ್ಯವಾಗಿ **ದೇಶ** ಮತ್ತು **ರಾಷ್ಟ್ರ** ಪದಗಳನ್ನು ಅದಲು ಬದಲಾಗಿ ಬಳಸುತ್ತೇವೆ. ಆದರೆ ನಿರ್ದಿಷ್ಟ ಭೌಗೋಳಿಕ ಮೇರೆ ಇರುವ ಒಂದು ಆಡಳಿತಕ್ಕೆ ಒಳಪಟ್ಟ ಪ್ರದೇಶವೇ ದೇಶ.

ಒಂದೇ ಇತಿಹಾಸ, ಸಂಸ್ಕೃತಿ, ಆಶೋತ್ತರಗಳುಳ್ಳ ಹಾಗೂ ತಾವು ಒಂದೇ ಎಂಬ ಭಾವನೆಯಿಂದ ಬದುಕುವ ಜನತೆಯನ್ನು ಒಳಗೊಂಡ ದೇಶವೇ ರಾಷ್ಟ್ರ.





ಮೇಲೆ ಖಾಲಿ ಬಿಟ್ಟಿರುವ ಜಾಗಗಳಲ್ಲಿ ಸರಿಯಾದ ದಿನಾಂಕವನ್ನು ಭರ್ತಿ ಮಾಡು.

© KTBS NOT TO BE REPUBLISHED

ಇದಲ್ಲದೆ ಕರ್ನಾಟಕದಲ್ಲಿ ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವ ಆಚರಿಸುತ್ತಾರೆ. ಅಂದು ನಮ್ಮ ರಾಜ್ಯವು ರಚನೆಯಾದ ದಿನ. ಈ ದಿನವನ್ನು ಕರ್ನಾಟಕ ರಾಜ್ಯದ ಜನರು ಸಂಭ್ರಮದಿಂದ ಆಚರಿಸುತ್ತಾರೆ.



ಓದಿ–ತಿಳಿ

ಪರಂಪರೆಯಿಂದ ಬಂದ ಸಾಂಸ್ಕೃತಿಕ ಐಕ್ಯತೆಯನ್ನುಂಟು ಮಾಡುವ ಹಬ್ಬಗಳನ್ನು ನಾಡಹಬ್ಬವೆಂದು ಆಚರಿಸುವ ಪದ್ಧತಿಯಿದೆ. ಕರ್ನಾಟಕದಲ್ಲಿ ದಸರಾವನ್ನು ನಾಡಹಬ್ಬವಾಗಿ ಆಚರಿಸುತ್ತೇವೆ.



© KSEEB NOT TO BE REPUBLISHED

ಈ ಪ್ರಶ್ನೆಗಳಿಗೆ ಉತ್ತರಿಸು.

1. ಇದು ಏನು? ಇದರಲ್ಲಿ ಎಷ್ಟು ಬಣ್ಣಗಳಿವೆ? ಮಧ್ಯದಲ್ಲಿ ಏನಿದೆ?



_____

_____

_____

2. ನಿನ್ನ ಶಾಲೆಯಲ್ಲಿ ರಾಷ್ಟ್ರಧ್ವಜವನ್ನು ಯಾವ ದಿನಗಳಲ್ಲಿ ಹಾರಿಸುತ್ತಾರೆ?

_____

_____

_____

3. ನೀನು ಶಾಲೆಯ ಪ್ರಾರ್ಥನೆಯಲ್ಲಿ ಪ್ರತಿನಿತ್ಯ ಹಾಡುವ ಗೀತೆಗಳಾವುವು?

_____

_____

4. ನಮ್ಮ ನಾಡಗೀತೆ ಯಾವುದು? ರಾಷ್ಟ್ರಗೀತೆ ಯಾವುದು?

ನಾಡಗೀತೆ : _____

ರಾಷ್ಟ್ರಗೀತೆ : _____

5. ರಾಷ್ಟ್ರಗೀತೆ, ನಾಡಗೀತೆ ಹಾಡುವಾಗ ನೀನು ಏಕೆ ನಿಲ್ಲುವೆ?

_____

_____

©KTBS NOT TO BE REPUBLISHED



ಮಗು, ನಿನಗೆ
ರಾಷ್ಟ್ರಬಾವುಟ ಮತ್ತು ರಾಷ್ಟ್ರಗೀತೆ ಗೊತ್ತಾಯಿತು.
ಇಲ್ಲಿ ಇರುವ ಕಂಬ ನೋಡು. ಅದರ ಮೇಲಿರುವ ನಾಲ್ಕು
ಸಿಂಹಗಳನ್ನು ನೋಡು. ಇದೇ ನಮ್ಮ ರಾಷ್ಟ್ರಮುದ್ರೆ.
ಇದಕ್ಕೆ **ಸಿಂಹ ಬೋದಿಗೆ** ಎಂಬ ಹೆಸರಿದೆ.



ಮೂರು
ಸಿಂಹಗಳು
ನಿಂತಿರುವಂತೆ
ಮುದ್ರೆಯಲ್ಲಿ
ಕಾಣುತ್ತಿದೆ.





ಇಲ್ಲಿ ನಾಲ್ಕು
ಸಿಂಹಗಳಿವೆ.
ಸಿಂಹಗಳು ಒಂದಕ್ಕೊಂದು
ಬೆನ್ನು ಹಾಕಿ ನಿಂತಿರುವುದರಿಂದ
ನಾಲ್ಕನೇ ಸಿಂಹವು ಮರೆಯಾಗಿದೆ.
ಸಿಂಹದ ಕೆಳಗೆ ಓಡುತ್ತಿರುವ
ಕುದುರೆ, ಚಕ್ರ ಮತ್ತು ಬಸವ
ಇವೆ.ಇವುಗಳ ಕೆಳಗೆ
ಸತ್ಯಮೇವ ಜಯತೇ
ಎಂಬ ನುಡಿ ಇದೆ.

NOT TO BE REPUBLISHED © KTBS

ರಾಷ್ಟ್ರಮುದ್ರೆಯನ್ನು ನೀನು ಎಲ್ಲೆಲ್ಲಿ ನೋಡಿರುವೆ? ಇಲ್ಲಿ ಬರೆ.

_____ _____

_____ _____

_____ _____



ಓದಿ–ತಿಳಿ

- **ರಾಷ್ಟ್ರಮುದ್ರೆ, ರಾಷ್ಟ್ರಧ್ವಜ** ಮತ್ತು **ರಾಷ್ಟ್ರಗೀತೆಗಳು** ನಮ್ಮ ರಾಷ್ಟ್ರದ ಮುಖ್ಯ ರಾಷ್ಟ್ರಲಾಂಛನಗಳು.
- ದೇಶಾಭಿಮಾನ, ಭಾವೈಕ್ಯತೆ ಮತ್ತು ಒಗ್ಗಟ್ಟಿನ ಗುಣಗಳನ್ನು ಬೆಳೆಸಿಕೊಳ್ಳಲು ಇವು ಸಹಕಾರಿ.

ನಿನ್ನ ಶಾಲೆಯಲ್ಲಿ ಆಚರಿಸುವ ರಾಷ್ಟ್ರೀಯ ಹಬ್ಬಗಳನ್ನು ದಿನಾಂಕಗಳೊಂದಿಗೆ ಪಟ್ಟಿ ಮಾಡು. ಅವುಗಳಲ್ಲಿ ಒಂದರ ಬಗ್ಗೆ ನಾಲ್ಕು ಸಾಲುಗಳನ್ನು ಬರೆ.

_____

_____

_____

_____

_____

_____

ಚಿತ್ರದಲ್ಲಿ ಒಂದು ಶಾಲೆಯ ಮಕ್ಕಳ ದಿನಾಚರಣೆ ಸಮಾರಂಭದ ಚಿತ್ರವಿದೆ. ಗಮನಿಸು.



© KTBS NOT TO BE REPUBLISHED

ಈ ಚಿತ್ರದಲ್ಲಿ ಮಕ್ಕಳು ಮಾಡುತ್ತಿರುವ ಕೆಲಸಗಳನ್ನು ಪಟ್ಟಿ ಮಾಡು.

_____

_____

_____

_____

ನಿನ್ನ ಶಾಲೆಯಲ್ಲಿ ಮಕ್ಕಳ ದಿನಾಚರಣೆಯನ್ನು ಹೇಗೆ ಆಚರಿಸುವರು ಎಂದು ನಾಲ್ಕು ಸಾಲುಗಳಲ್ಲಿ ಬರೆ. ಆ ದಿನ ನೀನೇನು ಮಾಡುವೆ ಎಂಬುದನ್ನು ಬರೆ.

_____

_____

_____

_____

ನಿನಗಿದು ಗೊತ್ತೆ?

- ಕರ್ನಾಟಕದ ಧ್ವಜದ ಬಣ್ಣ – ಹಳದಿ ಮತ್ತು ಕೆಂಪು



- ಕರ್ನಾಟಕದ ಪ್ರಾಣಿ – ಆನೆ



- ಕರ್ನಾಟಕದ ಹೂ – ಕಮಲ



- ಕರ್ನಾಟಕದ ವೃಕ್ಷ – ಶ್ರೀಗಂಧದ ಮರ



@KTBS NOT TO BE REPUBLISHED


- ಕರ್ನಾಟಕದ ಪಕ್ಷಿ – ನೀಲಕಂಠ




- ಭಾರತದ ರಾಷ್ಟ್ರೀಯ ಪ್ರಾಣಿ – ಹುಲಿ




- ರಾಷ್ಟ್ರೀಯ ಹೂ – ಕಮಲ



- ರಾಷ್ಟ್ರೀಯ ಪಕ್ಷಿ – ನವಿಲು



- ರಾಷ್ಟ್ರೀಯ ಮರ – ಆಲದ ಮರ



- ರಾಷ್ಟ್ರೀಯ ಹಣ್ಣು – ಮಾವು



@KTBS
NOT TO BE REPUBLISHED

✳✳✳

ಪಾಠ – 21

ಖೋ . . . . .

U6K4N9

ಈ ಪಾಠವನ್ನು ಕಲಿತ ನಂತರ ನೀನು,

- ಆಟಗಳು ಮತ್ತು ನಿಯಮಗಳ ಪರಿಚಯ ಮಾಡಿಕೊಳ್ಳುವೆ.
- ಆಟಗಳಿಂದ ಸಾಮಾಜಿಕ ಸಂಬಂಧಗಳು ವೃದ್ಧಿಯಾಗುವುದೆಂದು ಗುರುತಿಸುವೆ.
- ಜಾತ್ರೆ ಮತ್ತು ಸರ್ಕಸ್ಸಿನ ಮೂಲಕ ದೊರೆಯುವ ಮನರಂಜನೆಯ ಬಗ್ಗೆ ವಿವರಿಸುವೆ.

ನೀನು ಹಿಂದಿನ ತರಗತಿಯಲ್ಲಿ ಒಳಾಂಗಣ ಮತ್ತು ಹೊರಾಂಗಣ ಆಟಗಳ ಬಗ್ಗೆ ತಿಳಿದಿರುವೆ. ಶಾಲೆಯಲ್ಲಿ ಶಿಕ್ಷಕರೂ ಅನೇಕ ಆಟಗಳನ್ನು ಆಡಿಸಿರಬಹುದು. ನಿನಗೆ ಯಾವ ಯಾವ ಆಟಗಳ ಪರಿಚಯ ಇದೆ ಎಂಬುದನ್ನು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ ತಿಳಿದುಕೊ.

1. ಹುಣಸೆ ಬೀಜ ಬಳಸಿ ಆಡುವ ಒಂದು ಆಟ.

   _____

2. ಕುಂಟಿಕೊಂಡು ಆಡುವ ಆಟ

   _____

3. ಬ್ಯಾಟ್ ಮತ್ತು ಬಾಲ್ ಬಳಸಿ ಆಡುವ ಒಂದು ಆಟ.

   _____

4. ದಾಳಗಳಿಂದ ಆಡುವ ಆಟ.

   _____

5. ಕವಡೆ ಬಳಸಿ ಆಡುವ ಆಟ.

   _____

6. ನೀರಿನಲ್ಲಿ ಆಡುವ ಒಂದು ಆಟ.

   _____

7. ತಂಡಗಳಲ್ಲಿ ಆಡುವ ಒಂದು ಆಟ.

   _____

@KTBS NOT TO BE REPUBLISHED

8. ಕೈಗಳಿಂದ ಆಡುವ ಚೆಂಡಾಟ.

_____



9. ನಿನ್ನ ಜಿಲ್ಲೆಯ ವಿಶೇಷವಾದ ಆಟ.

_____

10. ಜಾತ್ರೆಯಲ್ಲಿ ನೀನು ನೋಡಿರುವ ಆಟ.

_____

ಇಲ್ಲಿ ಕೆಲವು ಆಟಗಳ ಹೆಸರನ್ನು ಮತ್ತು ಆಟದ ಸಾಮಗ್ರಿಗಳ ಚಿತ್ರವನ್ನು ನೀಡಿದೆ. ಇವುಗಳನ್ನು ಹೊಂದಿಸು.

ಹಾಕಿ	
ಕ್ರಿಕೆಟ್	
ಬ್ಯಾಡ್‌ಮಿಂಟನ್	
ಬಿಲ್ಲುಗಾರಿಕೆ	
ಕೇರಂ	
ಚೆಸ್	

@KTBS NOT TO BE REPUBLISHED

ಇವರು ನಿನಗೆ ಗೊತ್ತೆ? ಇವರು ಯಾವ ಆಟದಲ್ಲಿ ಅತ್ಯಂತ ನಿಪುಣರು? ಬಿಟ್ಟ ಜಾಗದಲ್ಲಿ ಬರೆ.

 ರಾಹುಲ್ ದ್ರಾವಿಡ್	_____	 ಸಚಿನ್ ತೆಂಡೂಲ್ಕರ್	_____
 ಪ್ರಕಾಶ್ ಪಡುಕೋಣೆ	_____	 ಪಿ. ಟಿ. ಉಷಾ	_____
 ಮಾಲತಿ ಹೊಳ್ಳ	_____	 ಅಭಿನವ ಬಿಂದ್ರಾ	_____
 ಧನರಾಜ್ ಪಿಳ್ಳೈ	_____	 ವಿಶ್ವನಾಥನ್ ಆನಂದ್	_____
 ಸಾನಿಯ ಮಿರ್ಜಾ	_____	 ಮಮತಾ ಪೂಜಾರಿ	_____


@KTBS NOT TO BE REPUBLISHED

ನೀನು ನಿನ್ನ ಗೆಳೆಯರೊಂದಿಗೆ ಶಾಲೆಯಲ್ಲಿ ಆಡುವ 4 ಹೊರಾಂಗಣ ಆಟಗಳನ್ನು ಬರೆ.

_____ _____

_____ _____

4ನೇ ತರಗತಿ ಮಕ್ಕಳಿಗೆ ಅಂದು ಖುಷಿಯೋ ಖುಷಿ. ಅವರ ಶಿಕ್ಷಕಿ ಅಂದು ಖೋ ಖೋ ಆಟ ಹೇಳಿಕೊಡುವ ದಿನ. ಕಾತುರರಾಗಿ ಕಾಯುತ್ತಿದ್ದ ಮಕ್ಕಳನ್ನು ಶಿಕ್ಷಕಿ ಆಟದ ಬಯಲಿಗೆ ಕರೆತಂದರು. ಖೋಖೋ ಮೈದಾನ ತೋರಿಸಿದರು.



@KTBS NOT TO BE REPUBLISHED

ಮಕ್ಕಳೆಲ್ಲ ಮೈದಾನವನ್ನು ಸುತ್ತಿಬಂದ ನಂತರ ಶಿಕ್ಷಕಿ ಈ ಪ್ರಶ್ನೆಗಳನ್ನು ಕೇಳಿದರು. ಚಿತ್ರದಲ್ಲಿ ತೋರಿಸಿದ ಖೋಖೋ ಮೈದಾನವನ್ನು ನೋಡಿ, ಶಿಕ್ಷಕಿ ಕೇಳಿದ ಪ್ರಶ್ನೆಗಳಿಗೆ ನೀನೂ ಉತ್ತರ ಬರೆ.

1. ಖೋ ಖೋ ಮೈದಾನವು ಯಾವ ಆಕಾರದಲ್ಲಿದೆ?

   _____

2. ಖೋ ಖೋ ಅಂಕಣದಲ್ಲಿ ಎಷ್ಟು ಕಂಬಗಳಿವೆ?

   _____

3. ಎರಡು ಕಂಬಗಳ ಮಧ್ಯದಲ್ಲಿ ಎಷ್ಟು ಚೌಕಗಳಿವೆ?

   _____

4. ಕಂಬದಿಂದ ಕಂಬಕ್ಕೆ ಎಷ್ಟು ಗೆರೆಗಳನ್ನು ಎಳೆಯಲಾಗಿದೆ?

   _____

ಶಿಕ್ಷಕಿ ಮಕ್ಕಳನ್ನು 12 ಜನ ಆಟಗಾರರ ಒಂದು ತಂಡದಂತೆ ಎರಡು ತಂಡಗಳಾಗಿ ಮಾಡಿದರು. ಒಂದು ತಂಡ ಓಡುವ ತಂಡ, ಮತ್ತೊಂದು ತಂಡ ಮುಟ್ಟುವ ತಂಡ ಎಂದು ತಿಳಿಸಿದರು.

ಆನಂತರ ಶಿಕ್ಷಕಿ ಆಟದ ನಿಯಮಗಳು ಮತ್ತು ಆಡುವ ಕ್ರಮಗಳನ್ನು ವಿವರಿಸಿದರು.




ಓದಿ–ತಿಳಿ

ನಿಯಮಗಳು

- ಆಟದಲ್ಲಿ ಎರಡು ಸರದಿ (ಇನ್ನಿಂಗ್ಸ್) ಇರುತ್ತದೆ. ಪ್ರತಿ ಇನ್ನಿಂಗ್ಸ್‌ನಲ್ಲಿ ಓಡುವ ಮತ್ತು ಮುಟ್ಟುವ ಸುತ್ತುಗಳಿರುತ್ತವೆ. ಒಂದು ಸುತ್ತಿನ ಕಾಲಾವಧಿ 7 ನಿಮಿಷಗಳು.
- ಖೋ ಖೋ ತಂಡವೊಂದರಲ್ಲಿ ಒಟ್ಟು 12 ಆಟಗಾರರಿರುತ್ತಾರೆ. ಅವರಲ್ಲಿ ಒಂಭತ್ತು ಆಟಗಾರರು ಆಡುವವರು ಮತ್ತು ಮೂವರು ಬದಲಿ ಆಟಗಾರರು.

ಶಿಕ್ಷಕಿ ಮಕ್ಕಳಿಂದ ಆಟ ಆಡಿಸಲು ಪ್ರಾರಂಭಿಸಿದರು.
ಈ ಚಿತ್ರಗಳನ್ನು ನೋಡಿ ಆಟ ಆಡುವ ಕ್ರಮವನ್ನು ಬರೆ.



@KTBS NOT TO BE REPUBLISHED

ಎಷ್ಟು ಜನ ಆಟಗಾರರು ಕುಳಿತಿದ್ದಾರೆ?

_____

ಕಂಬದ ಬಳಿ ಎಷ್ಟು ಆಟಗಾರರು ನಿಂತಿದ್ದಾರೆ?

_____

ಆಟಗಾರರು ಹೇಗೆ ಕುಳಿತಿದ್ದಾರೆ?

_____


ಅಂಕಣದೊಳಗೆ ಎಷ್ಟು ಆಟಗಾರರು ಇಳಿಯುತ್ತಿದ್ದಾರೆ?

_____

ಆಟದ ಮೈದಾನದ ಬಳಿ ಎಷ್ಟು ಗುಂಪು ಸಿದ್ಧವಾಗಿ ಕುಳಿತಿದೆ? ಪ್ರತಿ ಗುಂಪಿನಲ್ಲಿ ಎಷ್ಟು ಆಟಗಾರರಿದ್ದಾರೆ?

_____


_____



ಈ ಚಿತ್ರದಲ್ಲಿ ಏನು ನಡೆಯುತ್ತಿದೆ?

_____

_____




ಹಿಡಿಯುತ್ತಿರುವ ಆಟಗಾರ ಏನು ಮಾಡುತ್ತಿದ್ದಾನೆ? ಏನು ಹೇಳುತ್ತಿದ್ದಾನೆ?

_____

_____

NOT TO BE REPUBLISHED ©KTBS




ಶಿಕ್ಷಕಿ ಔಟ್ ಎಂದು ಏಕೆ ಹೇಳಿದರು?

_____

_____

_____

ಆಟ ಆಡಿದ ನಂತರ ಶಿಕ್ಷಕಿ ಮಕ್ಕಳಿಗೆ ನಿಯಮಗಳನ್ನು ಚಿತ್ರದ ಮೂಲಕ ಮತ್ತೊಮ್ಮೆ ಸರಿಯಾಗಿ ಹೇಳಿಕೊಟ್ಟರು.




©KTBS NOT TO BE REPUBLISHED

ಈ ನಿಯಮಗಳನ್ನು ಮೀರಿದರೆ ಫೌಲ್(ತಪ್ಪು) ಎಂಬುದು ಮಕ್ಕಳಿಗೆ ತಿಳಿಯಿತು.

ಮತ್ತೊಂದು ತಂಡದ ಆಟಗಾರರು ತಾವು ಹೇಗೆ ಆಟ ಆಡಿದೆವು ಎಂಬುದನ್ನು ಚರ್ಚಿಸಿದರು.

ಓಟಗಾರರು ತಾವು ಔಟ್ ಆಗದಂತೆ ಹೇಗೆ ಚಲಿಸಿ ತಪ್ಪಿಸಿಕೊಂಡೆವು ಎಂಬುದನ್ನು ತಿಳಿಸಿದರು.



ಆಡಿದ ನಂತರ ಮಕ್ಕಳು ಮತ್ತು ಶಿಕ್ಷಕಿ ತರಗತಿಗೆ ತೆರಳಿದರು.

ಆಡಿ–ನೋಡಿ

ನೀನು ನಿನ್ನ ಗೆಳೆಯರೊಂದಿಗೆ ಶಿಕ್ಷಕರ ನೆರವಿನಿಂದ ಖೋ ಖೋ ಮೈದಾನ ಸಿದ್ಧಮಾಡು. ಖೋಖೋ ಆಟ ಆಡು.

ಖೋ ಖೋ ಆಟದ 4 ನಿಯಮಗಳನ್ನು ಬರೆ.

1. _____

2. _____

3. _____

4. _____

@KTBS NOT TO BE REPUBLISHED

ನೀನು ಇದುವರೆಗೂ ಖೋ ಖೋ ಆಟದ ನಿಯಮಗಳನ್ನು ತಿಳಿದೆ.

ಇದೇ ರೀತಿ ಬೇರೆ ಬೇರೆ ಆಟಗಳ ನಿಯಮಗಳನ್ನು ಪರಿಚಯ ಮಾಡಿಕೊ. ನಿನಗಿಷ್ಟವಾದ ಅಥವಾ ನೀನು ಆಡುವ ಯಾವುದಾದರೊಂದು ಆಟದ ಮುಖ್ಯ ನಿಯಮಗಳನ್ನು ಬರೆ.

_____

_____

_____

_____

_____

ಗುಂಪು ಆಟಗಳಿಂದ ನಿನಗಾಗುವ ಪ್ರಯೋಜನಗಳೇನು? ಗೆಳೆಯರೊಂದಿಗೆ ಚರ್ಚಿಸಿ ಬರೆ.

_____

_____

_____

_____

_____

@KTBS NOT TO BE REPUBLISHED



ಓದಿ–ತಿಳಿ

ಗುಂಪು ಆಟಗಳನ್ನು ಆಡುವಾಗ ಸಹಕಾರ, ಹೊಂದಾಣಿಕೆ, ತಂಡದ ಸ್ಫೂರ್ತಿ, ನಿಯಮ ಪಾಲನೆ, ಗೆಲೆತನ, ಗುರಿಮುಟ್ಟುವ ನಿರ್ಧಾರ ಮುಂತಾದ ಅಂಶಗಳು ಇರುವುದರಿಂದ ಸಾಮಾಜಿಕ ಸಂಬಂಧಗಳು ಚೆನ್ನಾಗಿ ಬೆಸೆಯುತ್ತವೆ.

ಆಟಗಳಿಂದ ನಮಗೆ ಮನರಂಜನೆ ದೊರೆಯುತ್ತದೆ. ಇದೇ ರೀತಿ ಜಾತ್ರೆ, ಸರ್ಕಸ್‌ಗಳ ಮೂಲಕವೂ ಮನರಂಜನೆ ದೊರಕುತ್ತದೆ.

ಜಾತ್ರೆಯ ಬಗ್ಗೆ ನೀನು ಈಗಾಗಲೇ ತಿಳಿದಿರುವೆ. ಇಲ್ಲಿ ಸರ್ಕಸ್ಸಿನ ಒಂದು ಚಿತ್ರ ಇದೆ. ಗಮನಿಸು.



ಸರ್ಕಸ್ಸಿನಲ್ಲಿ ಏನೇನು ವಿಶೇಷತೆ ಇದೆ ಎಂಬುದನ್ನು ಪಟ್ಟಿಮಾಡು.

_____

_____

_____

_____

ನೀನು ನೋಡಿರುವ ಅಥವಾ ಕೇಳಿರುವ ಸರ್ಕಸ್ಸಿನ ಬಗ್ಗೆ ನಾಲ್ಕು ಸಾಲುಗಳನ್ನು ಬರೆ.

_____

_____

_____

_____

NOT TO BE REPUBLISHED © KSEEB

ನಿನ್ನ ಜಿಲ್ಲೆಯ ಪ್ರಸಿದ್ಧ ಜಾತ್ರೆಯ ಬಗ್ಗೆ ನಾಲ್ಕು ಸಾಲುಗಳನ್ನು ಹಿರಿಯರ ಸಹಾಯ ಪಡೆದು ಬರೆ.

_____

_____

_____

_____



ಓದಿ–ತಿಳಿ

ಹಿಂದೆ ಬಹಳ ಜನಪ್ರಿಯತೆ ಗಳಿಸಿದ್ದ ಸರ್ಕಸ್‌ಗಳ ಸಂಖ್ಯೆ ಇಂದು ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣವೇನೆಂದರೆ,

- ಸರ್ಕಸ್‌ನಲ್ಲಿ ಪ್ರಾಣಿಗಳನ್ನು ಬಳಸಿ ಮನರಂಜನೆ ನೀಡುವುದು ಮತ್ತು ಪ್ರಾಣಿಗಳಿಗೆ ಹಿಂಸೆ ನೀಡಿ ತರಬೇತುಗೊಳಿಸುವುದಕ್ಕೆ ಪ್ರಾಣಿ ದಯಾ ಸಂಘಗಳ ವಿರೋಧವಿದೆ.
- ಜನರಿಗೆ ಟಿ.ವಿ, ಕಂಪ್ಯೂಟರ್, ಮೊಬೈಲ್ ಇತ್ಯಾದಿಗಳಿಂದ ಸುಲಭವಾಗಿ ಮನರಂಜನೆ ದೊರೆಯುತ್ತಿದ್ದು, ಸರ್ಕಸ್ಸಿನ ಬಗ್ಗೆ ಆಸಕ್ತಿ ಕಡಿಮೆಯಾಗುತ್ತಿದೆ.
- ನಿಪುಣ ಕಲಾಕಾರರ ಕೊರತೆ ಇದೆ ಮತ್ತು ಅವರ ಕಲೆಗೆ ತಕ್ಕ ಪ್ರೋತ್ಸಾಹ ಕಡಿಮೆಯಾಗುತ್ತಿದೆ.
- ಸರ್ಕಸ್ಸಿನ ಕಲಾವಿದರಿಗೆ ಅಗತ್ಯವಾದ ಸೌಲಭ್ಯಗಳ ನಿರ್ವಹಣೆಯು ಹೆಚ್ಚು ದುಬಾರಿಯಾಗಿದೆ.

ನಿನಗಿದು ಗೊತ್ತೆ?

- ಪ್ರಕಾಶ್ ಪಡುಕೋಣೆ ರಾಷ್ಟ್ರೀಯ ಚಾಂಪಿಯನ್‌ಶಿಪ್ ಗೆದ್ದ ಅತ್ಯಂತ ಕಿರಿಯ ವಯಸ್ಸಿನ ಬ್ಯಾಡ್‌ಮಿಂಟನ್ ಆಟಗಾರರು.
- ಖೋ ಖೋ ಆಟಕ್ಕೆ ರಾಣಿ ಲಕ್ಷ್ಮೀ ಪ್ರಶಸ್ತಿ ಪಡೆದ ಮೊದಲ ಮಹಿಳೆ ಕರ್ನಾಟಕದ ಉಷಾ ಅನಂತರಾಮನ್.
- ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ರಾಜ್ಯದಾದ್ಯಂತ ಅನೇಕ ಕ್ರೀಡಾ ಶಾಲೆಗಳೂ ಮತ್ತು ಕ್ರೀಡಾ ನಿಲಯಗಳು ಕಾರ್ಯ ನಿರ್ವಹಿಸುತ್ತಿವೆ.
- 1981ರಲ್ಲಿ ಬೆಂಗಳೂರಿನಲ್ಲಿ ನಡೆಯುತ್ತಿದ್ದ ವೀನಸ್ ಸರ್ಕಸ್‌ಗೆ ಬೆಂಕಿ ಬಿದ್ದು 92 ಜನರು ಮೃತರಾದರು. ಸುಮಾರು ೩೦೦ ಜನರು ಗಾಯಗೊಂಡಿದ್ದರು.
- ಹಿಂದೆ ಸರ್ಕಸ್ಸಿನಲ್ಲಿ ಪ್ರಾಣಿಗಳ ಪ್ರದರ್ಶನ ಮತ್ತು ಚಮತ್ಕಾರಗಳು ಬಹುದೊಡ್ಡ ಆಕರ್ಷಣೆಯಾಗಿತ್ತು. ಆದರೆ ಪ್ರಾಣಿಗಳನ್ನು ತರಬೇತುಗೊಳಿಸಲು ಹಿಂಸಾ ಮಾರ್ಗವನ್ನು ಅನುಸರಿಸಲಾಗುತ್ತಿದೆ ಎಂದು ಇತ್ತೀಚೆಗೆ ಸರ್ಕಸ್ಸಿನಲ್ಲಿ ಪ್ರಾಣಿಗಳ ಬಳಕೆಯನ್ನು ನಿಷೇಧಿಸುವ ಪ್ರಯತ್ನಗಳು ನಡೆಯುತ್ತಿವೆ.

© KTBS NOT TO BE REPUBLISHED

2012ರ ಒಲಿಂಪಿಕ್ ಕ್ರೀಡಾಕೂಟದಲ್ಲಿ ಭಾರತಕ್ಕೆ ಪದಕಗಳನ್ನು ತಂದು ಕೊಟ್ಟ ಕ್ರೀಡಾ ಪಟುಗಳು.



ಗಗನ್ ನಾರಂಗ್



ವಿಜಯ ಕುಮಾರ್



ಸುಶೀಲ್ ಕುಮಾರ್



ಯೋಗೀಶ್ವರ್ ದತ್



ಮೇರಿ ಕೋಮ್



ಗಿರೀಶ್



ಸೈನಾ ನೆಹ್ವಾಲ್

@KTBS NOT TO BE REPUBLISHED

- ಇವರು ಭಾಗವಹಿಸಿದ ಕ್ರೀಡೆಯ ಹೆಸರನ್ನು ಚಿತ್ರದ ಪಕ್ಕದಲ್ಲಿ ನೀಡಿರುವ ಚೌಕದಲ್ಲಿ ಬರೆ.
- 2016ರ ಒಲಿಂಪಿಕ್ಸ್ ಕ್ರೀಡೆಯಲ್ಲಿ ಭಾರತಕ್ಕೆ ಪದಕಗಳನ್ನು ತಂದುಕೊಟ್ಟ ಕ್ರೀಡಾ ಪಟುಗಳ ಬಗ್ಗೆ ಮಾಹಿತಿ ಸಂಗ್ರಹಿಸು. (ಶಿಕ್ಷಕರು / ಹಿರಿಯರ ಸಹಾಯ ಪಡೆ)

✳✳✳

ಪಾಠ – 22


ಸೌಲಭ್ಯಗಳು–ಸುಧಾರಣೆ

P3U6H9

ಈ ಪಾಠವನ್ನು ಕಲಿತ ನಂತರ ನೀನು,







- ಸ್ವಾಭಾವಿಕ ಸಂಪನ್ಮೂಲಗಳು ಮತ್ತು ಸೃಜನಶೀಲತೆಯು ಮಾನವನ ಬದುಕನ್ನು ಹೇಗೆ ಬದಲಾಯಿಸಿದೆ ಎಂಬುದನ್ನು ಉದಾಹರಣೆಗಳೊಂದಿಗೆ ವಿವರಿಸುವೆ.

ಕೆಳಗಿನ ಚಿತ್ರದಲ್ಲಿ ನಿನಗೆ ಬದುಕಲು ಅತಿ ಅಗತ್ಯ ಎನಿಸಿದ ಚಿತ್ರಗಳಿಗೆ ಬಣ್ಣ ಹಾಕು.




@KTBS NOT TO BE REPUBLISHED

ಕೆಳಗಿನ ಚಿತ್ರಗಳನ್ನು ಗಮನಿಸು. ಜನರು ಅಂದು ಮತ್ತು ಇಂದು ಬಳಸುತ್ತಿರುವ ವಸ್ತುಗಳಲ್ಲಿ ಇರುವ ವ್ಯತ್ಯಾಸವನ್ನು ಗಮನಿಸು.

© KTBS NOT TO BE REPUBLISHED

ಕೆಳಗಿನವುಗಳನ್ನು ಮಾದರಿಯಂತೆ ಗೆರೆ ಎಳೆದು ಹೊಂದಿಸು.




@KTBS NOT TO BE REPUBLISHED

ಓದಿ–ತಿಳಿ

ಮಾನವನು ವಿಜ್ಞಾನ, ತಂತ್ರಜ್ಞಾನಗಳ ನೆರವಿನಿಂದ ಹಲವು ಸ್ವಾಭಾವಿಕ ಸಂಪನ್ಮೂಲಗಳನ್ನು ಬಳಸಲು ಕಲಿತಿದ್ದಾನೆ. ಉದಾಹರಣೆಗೆ, ಯಂತ್ರಗಳು, ಪಾತ್ರೆಗಳು, ಮನೆಕಟ್ಟಲು ಲೋಹಗಳ ಉಪಯೋಗ; ಟ್ರಾಕ್ಟರ್‌ಗಳು, ಲಾರಿಗಳು, ಬಸ್, ನೀರೆತ್ತುವ ಪಂಪ್ ಮುಂತಾದುವುಗಳಿಗೆ ಪೆಟ್ರೋಲ್, ಡೀಸೆಲ್‌ಗಳ ಉಪಯೋಗ; ಮರಗಳ ತಿರುಳಿನಿಂದ ಕಾಗದ ತಯಾರಿಕೆ ಇತ್ಯಾದಿ. ಇದರ ಜೊತೆಗೆ ತನ್ನ ಸೃಜನಶೀಲತೆಯನ್ನೂ ಬೆರೆಸಿ ವಿವಿಧ ಮಾದರಿಯ ಯಂತ್ರಗಳು, ಬಟ್ಟೆ, ಪಾತ್ರೆಗಳು, ಕಾಗದ..... ಹೀಗೆ ಬಗೆಬಗೆಯ ಉತ್ಪನ್ನಗಳನ್ನು ತಯಾರಿಸಲು ಕಲಿತಿದ್ದಾನೆ. ಹೀಗೆ ಜನರು ಸ್ವಾಭಾವಿಕ ಸಂಪನ್ಮೂಲಗಳು ಮತ್ತು ಸೃಜನಶೀಲತೆಯಿಂದ ತಮ್ಮ ಬದುಕನ್ನು ಅನುಕೂಲಕರವಾಗಿ ಬದಲಾಯಿಸಿಕೊಳ್ಳುತ್ತಿದ್ದಾರೆ.

ಮಾಡಿ–ನೋಡು

1. ಹಿರಿಯರ ಸಹಾಯದಿಂದ ಮಣ್ಣಿನ ವಿವಿಧ ಮಾದರಿಗಳನ್ನು ಕೆಳಗಿನಂತೆ ಮಾಡಿ ಬಣ್ಣ ಹಾಕು.



@KTBS NOT TO BE REPUBLISHED

2. ವಿವಿಧ ಕಾಳು, ಮಣಿ, ಬಣ್ಣದ ಕಾಗದ, ಬಟ್ಟೆ ತುಂಡುಗಳನ್ನು ಬಳಸಿ ಹಿರಿಯರ ಸಹಾಯದಿಂದ ನಿನಗೆ ತಿಳಿದಿರುವ ಮಾದರಿಗಳನ್ನು ರಚಿಸಿ ಇಲ್ಲಿ ಅಂಟಿಸು.
(ಚಿತ್ರಗಳು, ಗ್ರೀಟಿಂಗ್ಸ್, ಅಲಂಕಾರಿಕ ವಸ್ತುಗಳು)

@KTBS
NOT TO BE REPUBLISHED

೩. ನೀನು ನೋಡಿರುವ ವಿವಿಧ ರೀತಿಯ ಮಡಕೆಗಳ ಚಿತ್ರಗಳನ್ನು ಬರೆ. ಇವುಗಳನ್ನು ಯಾವ ಕೆಲಸಗಳಿಗೆ ಬಳಸಬಹುದು ಎಂಬುದನ್ನು ಚಿತ್ರಗಳ ಕೆಳಗೆ ಸೂಚಿಸು.

@KTBS NOT TO BE REPUBLISHED

ನಿನಗಿದು ಗೊತ್ತೆ?

- ಚಾರ್ಲ್ಸ್ ಬ್ಯಾಬೇಜ್ ಎನ್ನುವ ಬ್ರಿಟಿಷ್‌ನ ಗಣಿತ ವಿಜ್ಞಾನಿಯು 1837ರಲ್ಲಿ ಮೊದಲನೆಯ ಗಣಕಯಂತ್ರವನ್ನು ತಯಾರಿಸಿದರು ಎಂಬುದಾಗಿ ಹೇಳುತ್ತಾರೆ. ಆದ್ದರಿಂದ ಅನೇಕರು ಇವರನ್ನು **ಗಣಕ ಪಿತಾಮಹ** ಎಂದೇ ಕರೆಯುತ್ತಾರೆ.
- ಲೋಹಗಳು ಗಟ್ಟಿಯಾಗಿರುತ್ತವೆ, ಹೊಳಪಾಗಿರುತ್ತವೆ. ಅವಕ್ಕೆ ನಾನಾ ರೀತಿಯ ಆಕಾರ ಕೊಡಬಹುದು, ಚೆನ್ನಾಗಿ ಸ್ವಚ್ಛಗೊಳಿಸಬಹುದು. ಲೋಹಗಳ ಉಪಯೋಗವಿಲ್ಲದ ಕೆಲಸವೇ ಇಲ್ಲ ಎಂದರೆ ಉತ್ಪ್ರೇಕ್ಷೆಯಾಗಲಾರದು.
- ಅಮೆರಿಕಾದ **ಲಿಬರ್ಟಿ ಪ್ರತಿಮೆ**ಯನ್ನು ಸುಮಾರು ೩,೫೦,೦೦೦ kg ತಾಮ್ರ ಉಪಯೋಗಿಸಿ ಮಾಡಲಾಗಿದೆ.
- ಮಣ್ಣಿನ ಮಡಕೆಗಳಲ್ಲಿ ಅಡುಗೆ ಮಾಡುವ ಅಭ್ಯಾಸ ಕಡಿಮೆಯಾಗಿದೆ.ಆದರೆ ಮಡಕೆ ತಯಾರಿಕೆಯಲ್ಲಿನ ಸೃಜನಶೀಲತೆಯಿಂದ ಹೂದಾನಿಗಳು, ಹೂಜಿಗಳು ಇತ್ಯಾದಿ ಅಲಂಕಾರಿಕ ವಸ್ತುಗಳು ಮನೆಯನ್ನು ಸಿಂಗರಿಸಿವೆ. ಇವನ್ನು ತಯಾರಿಸುವ ವಿಧಾನಗಳಲ್ಲೂ ಸುಧಾರಣೆಗಳಾಗಿವೆ.

ಪಾಠ – 23

ಉಡುಪು–ವಿನ್ಯಾಸ

T7C9T9

ಈ ಪಾಠವನ್ನು ಕಲಿತ ನಂತರ ನೀನು,


- ಉಡುಪುಗಳಲ್ಲಿರುವ ವಿವಿಧತೆ, ಬಟ್ಟೆ ತಯಾರಿಕೆಯಲ್ಲಿ ಬಳಸುವ ಬಣ್ಣ ಮತ್ತು ವಿನ್ಯಾಸದ ಬಗ್ಗೆ ಚರ್ಚಿಸುವೆ.
- ವಿವಿಧ ಜಿಲ್ಲೆಗಳಲ್ಲಿ ಬಳಸುವ ವಿವಿಧ ಉಡುಪುಗಳ ಬಗ್ಗೆ ತಿಳಿಯುವೆ.
- ಬಟ್ಟೆ ತುಂಡುಗಳನ್ನು ಸಂಗ್ರಹಿಸಿ ಉಡುಪಿನ ಮಾದರಿಗಳನ್ನು ತಯಾರಿಸುವೆ.

ಹಸಿವನು ನೀಗಲು ಆಹಾರ,
ರಕ್ಷಣೆಗಾಗಿಯೇ ಬಿಡಾರ,
ಉಡುಪದು ದೇಹಕೆ ಆಧಾರ.
ಬೇಸಿಗೆ ಕಾಲದಿ ತೆಳು ತೆಳು ಉಡುಪು,
ಮಳೆಯ ಕಾಲಕೆ ನುಣುಪಿನ ಉಡುಪು,
ಚಳಿ ಚಳಿಗಾಲಕೆ ಬೆಚ್ಚನೆ ಉಡುಪು.
ವಿಧ ವಿಧ ರಂಗಿನ ತರತರ ಉಡುಪು,
ವಿಧ ವಿಧ ನೂಲಿನ ತರತರ ಉಡುಪು,
ಬೇಕೇಬೇಕು ಎಲ್ಲರಿಗುಡುಪು.



©KTBS NOT TO BE REPUBLISHED

ಬಟ್ಟೆ ನಮಗೆ ಅವಶ್ಯಕ ಎಂಬುದು ನಿನಗೀಗಾಗಲೇ ಗೊತ್ತು.
ನೀನು ಧರಿಸುವ ವಿವಿಧ ಉಡುಪುಗಳ ಹೆಸರನ್ನು ಬರೆ.



ಮಾಡಿ–ನೋಡು

ವಿವಿಧ ನೂಲಿನಿಂದ ತಯಾರಿಸಿದ ಬಟ್ಟೆಯ ತುಂಡುಗಳನ್ನು ಸಂಗ್ರಹಿಸಿ ಅಂಟಿಸು. ನೂಲಿನ ವಿಧವನ್ನು ಹೆಸರಿಸು.

@KTBS
NOT TO BE REPUBLISHED

ಒಗಟು–ಬಿಡಿಸು

ನನ್ನನ್ನು ಕುರಿಯ ತುಪ್ಪಳದಿಂದ ತಯಾರಿಸುತ್ತಾರೆ. ಚಳಿಗಾಲದಲ್ಲಿ ನನ್ನನ್ನು ಧರಿಸುತ್ತಾರೆ. ಹಾಗಾದರೆ ನಾನ್ಯಾರು?

ಬೇಸಿಗೆ ಕಾಲದಲ್ಲಿ ನನ್ನ ಬಟ್ಟೆಯನ್ನೇ ಬಯಸುತ್ತಾರೆ. ರೈತರು ನನ್ನನ್ನು ಬೆಳೆಯುತ್ತಾರೆ. ಹಾಗಾದರೆ ನಾನ್ಯಾರು?


ಮಾಡಿ–ನೋಡು

1. ಬಟ್ಟೆ ತುಂಡುಗಳನ್ನು ಬಳಸಿ ವಿವಿಧ ಮಾದರಿಯ ಸಣ್ಣ ಉಡುಪುಗಳನ್ನು ತಯಾರಿಸಿ ಇಲ್ಲಿ ಅಂಟಿಸು.

2. ವಿವಿಧ ಮಾದರಿಯ ಉಡುಪುಗಳ ಚಿತ್ರಗಳನ್ನು ಸಂಗ್ರಹಿಸಿ ಅಂಟಿಸು.

@KTBS NOT TO BE REPUBLISHED

ನಿನ್ನ ಉಡುಪು ತಯಾರಾಗುವ ಹಾದಿಯನ್ನು ಪತ್ತೆ ಹಚ್ಚಿ ಇಲ್ಲಿ ಬರೆ. ಸಹಾಯಕ್ಕಾಗಿ ಕೆಳಗೆ ಕೊಟ್ಟ ಸುಳಿವು ಪದಗಳನ್ನು ನೋಡು.



ಕೆಳಗಿನ ಚಿತ್ರದಲ್ಲಿ ನಿನ್ನ ಊರಿನ ಜನರು ಸಾಮಾನ್ಯವಾಗಿ ಧರಿಸುವ ಉಡುಪುಗಳಿಗೆ (✓) ಗುರುತು ಹಾಕು.



ನಮ್ಮ ರಾಜ್ಯದ ವಿವಿಧ ಭಾಗಗಳಲ್ಲಿ ಜನರು ಧರಿಸುವ ಉಡುಪುಗಳ ಬಗ್ಗೆ ಶಾಲೆಯಲ್ಲಿ ಗೆಳೆಯರೊಂದಿಗೆ ಮತ್ತು ಶಿಕ್ಷಕರೊಂದಿಗೆ ಚರ್ಚಿಸು.

© KTBS NOT TO BE REPUBLISHED

ಬೇರೆ ಬೇರೆ ಕಾಲಗಳಲ್ಲಿ ಧರಿಸುವ ಉಡುಪುಗಳನ್ನು ಇಲ್ಲಿ ಬರೆ.

ಮಳೆಗಾಲ : _____ _____ _____

ಚಳಿಗಾಲ : _____ _____ _____

ಬೇಸಿಗೆ ಕಾಲ : _____ _____ _____


ಹೊಲಿದು ಬಳಸುವ ಉಡುಪುಗಳಿಗೆ ಮೂರು ಉದಾಹರಣೆ ಕೊಡು.


ಹೊಲಿಯದೆ ಬಳಸುವ ಉಡುಪುಗಳಿಗೆ ಮೂರು ಉದಾಹರಣೆ ಕೊಡು.

ಮಾಡಿ–ನೋಡು

1. ನಿನಗೆ ಸುಲಭವಾಗಿ ಸಿಗುವ ಎಲೆ, ತರಕಾರಿ, ಹೂ, ಕಾಯಿಗಳನ್ನು ಬಳಸಿ, (ದಾಸವಾಳ–ಎಲೆ, ಹೂ, ಬೀಟ್‌ರೂಟ್, ಅರಿಶಿನ) ಬಣ್ಣ ತಯಾರಿಸು.


2. ಬಿಳಿ ಬಟ್ಟೆ ತುಂಡಿನ ಮೇಲೆ ಬಣ್ಣ ಹಾಕು. ವಿನ್ಯಾಸಕ್ಕಾಗಿ ಕತ್ತರಿಸಿದ ಬೆಂಡೆಕಾಯಿ, ಮೂಲಂಗಿ, ಹೂ ಕೋಸಿನ ತುಂಡು ಇತ್ಯಾದಿಗಳನ್ನು ಬಳಸಬಹುದು.







@KTBS NOT TO BE REPUBLISHED


3. ಒಂದು ಬಟ್ಟೆಯಲ್ಲಿ ನಾಣ್ಯವನ್ನು ಬಿಗಿಯಾಗಿ ಕಟ್ಟಿ ಬಣ್ಣದ ನೀರಿಗೆ ಮುಳುಗಿಸಿ, ಒಣಗಿದ ನಂತರ ಬಿಡಿಸಿ ನೋಡು.





4. ನಾಲ್ಕೈದು ವಿಧದ ಬಣ್ಣವನ್ನು ನೀರಿಗೆ ಹಾಕಿ ಬಟ್ಟೆ ಇಲ್ಲವೇ ಕಾಗದವನ್ನು ಮುಳುಗಿಸಿ ತಕ್ಷಣ ತೆಗೆ. ಅದನ್ನು ಎಚ್ಚರಿಕೆಯಿಂದ ತೂಗುಹಾಕಿ ಒಣಗಿಸಿ ನಂತರ ನೋಡು.





5. ಬಿಳಿ ಹಾಳೆಯ ಮೇಲೆ ಬಣ್ಣದಿಂದ ಕೂಡಿದ ನಿನ್ನ ಹೆಬ್ಬೆರಳನ್ನು ಒತ್ತಿ ಚಿತ್ರ ಬಿಡಿಸಲು ಪ್ರಯತ್ನಿಸು.



© NCERT NOT TO BE REPUBLISHED

6. ಬಿಳಿ ಹಾಳೆಯ ಮೇಲೆ ಬಣ್ಣ ಹಚ್ಚಿದ ಹತ್ತಿಯಿಂದ ಚಿತ್ರಗಳನ್ನು ಮಾಡು.





ನಿನಗಿದು ಗೊತ್ತೆ?

- ಮೊತ್ತಮೊದಲ ಬಟ್ಟೆಗಳು ಚರ್ಮ, ತುಪ್ಪಳ, ಎಲೆ, ಹುಲ್ಲುಗಳಿಂದ ಮಾಡಲ್ಪಟ್ಟಿದ್ದವು.
- ಸಸ್ಯನಾರಿನಿಂದ ರೇಷ್ಮೆ,ನೈಲಾನ್‌ವರೆಗೂ ಅನೇಕ ವಿಧದ ನೂಲುಗಳಿವೆ. ಇವುಗಳಿಂದ ನಾನಾ ವಿಧದ ಬಟ್ಟೆಗಳು ತಯಾರಾಗುತ್ತವೆ. ಈ ಬಟ್ಟೆಗಳನ್ನು ಸಸ್ಯಗಳಿಂದ ಮತ್ತು ರಾಸಾಯನಿಕಗಳಿಂದ ತಯಾರಿಸಲಾದ ಬಣ್ಣ ಬಳಸಿ ಅಂದಗೊಳಿಸಲಾಗುತ್ತದೆ. ಮಾನವರ ಸೃಜನಶೀಲತೆಗೆ ಇದು ಒಂದು ಉದಾಹರಣೆ.
- ಕರ್ನಾಟಕವೆ ಭಾರತದ ಅತ್ಯಂತ ಹೆಚ್ಚು ರೇಷ್ಮೆ ಉತ್ಪಾದಿಸುವ ರಾಜ್ಯ. ಭಾರತದಲ್ಲಿ ಉತ್ಪನ್ನವಾಗುವ ರೇಷ್ಮೆಯ ಶೇ.70 ಭಾಗ ಕರ್ನಾಟಕ ರಾಜ್ಯದಿಂದ ಬರುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೆಚ್ಚಿನ ರೇಷ್ಮೆ ಉತ್ಪನ್ನವಾಗುತ್ತದೆ.
- ಒಂದು ಬಗೆಯ ಕೀಟಗಳ ಸ್ರಾವವೇ ರೇಷ್ಮೆ. ಹೀಗೆ ಸ್ರಾವವನ್ನು ಸ್ರವಿಸುವ ಕೀಟಗಳೇ ರೇಷ್ಮೆ ಹುಳುಗಳು.
- ಬಾಗಲಕೋಟೆ ಜಿಲ್ಲೆಯಲ್ಲಿರುವ ಇಳಕಲ್ ಎಂಬ ಊರಿನಲ್ಲಿ ತಯಾರಾಗುವ ಸೀರೆಗಳು ಜಗತ್ಪ್ರಸಿದ್ಧ.
- ಕರ್ನಾಟಕ ರಾಜ್ಯದ ಸಾಂಪ್ರದಾಯಿಕ ಉಡುಗೆ

  ಪುರುಷರ ಉಡುಗೆ : ಪಂಚೆ, ಷರಟು, ಅಂಗವಸ್ತ್ರ

  ಸ್ತ್ರೀಯರ ಉಡುಗೆ : ಸೀರೆ, ಕುಪ್ಪಸ ಅಥವಾ ಲಂಗ, ದಾವಣಿ, ಕುಪ್ಪಸ.

© KTBS NOT TO BE REPUBLISHED

✳✳✳


ಪಾಠ – 24

ಮೋಡಣ್ಣನ ಪಯಣ


A7G7U5

ಈ ಪಾಠವನ್ನು ಕಲಿತ ನಂತರ ನೀನು,

- ಭೂಮಿಯು ಎಲ್ಲರ ವಸತಿ. ಇಲ್ಲಿ ಜೀವಿಸಲು ಬೇಕಾದ ಗಾಳಿ, ಮಣ್ಣು, ನೀರು ಇದೆ ಎಂದು ಮೆಚ್ಚುವೆ.
- ಗಾಳಿ ಮತ್ತು ಮಣ್ಣಿನ ಪ್ರಾಮುಖ್ಯತೆಯನ್ನು ಗುರುತಿಸುವೆ.
- ಬೇರೆ ಬೇರೆ ಕಾಲಗಳಲ್ಲಿನ ಬದಲಾವಣೆಗಳನ್ನು ಗುರುತಿಸುವೆ.



© KTBS NOT TO BE REPUBLISHED



ಅರೆ! ಇದೆಲ್ಲಿಗೆ ಬಂದೆ ನಾನು!
ಅಬ್ಬಾ! ಎಷ್ಟೊಂದು ಬಿಸಿಲು.
ಎಲ್ಲಿ ನೋಡಿದ್ರೂ ಮರಳಿನ
ರಾಶಿ ಕಾಣುತ್ತಿದೆ. ಗಾಳಿ
ಬಲವಾಗಿ ಬೀಸುತ್ತಿದೆ.
ಮರಗಳೇ ಕಾಣಿಸ್ತಿಲ್ಲ.
ಪುಟಾಣಿ, ನಾನೀಗ
ಮರುಭೂಮಿಯಲ್ಲಿದ್ದೇನೆ.






ಹಾಗೇ ತೇಲಿಕೊಂಡು ಸ್ವಲ್ಪ
ಮೇಲುಮಟ್ಟಕ್ಕೆ ಈಗ ಬಂದೆ, ಅಬ್ಬಾ!
ಈ ಪ್ರದೇಶ ಎಷ್ಟು ವಿಶಾಲವಾಗಿ, ಸಮತಟ್ಟಾಗಿದೆ!
ಇಲ್ಲಿ ಹರಿದು ಬರುವ ನದಿಗಳು ಮಣ್ಣನ್ನು ಹೊತ್ತು
ತಂದು ಪ್ರದೇಶವನ್ನು ಫಲವತ್ತಾಗಿಸಿವೆ. ಇದು ಮೈದಾನ.
ಈ ಪ್ರದೇಶ ಹಸಿರೋ ಹಸಿರು.ಇದು ಬೇಸಾಯಕ್ಕೆ
ಉತ್ತಮವಾದ ಜಾಗ. ಅಯ್ಯೋ...ಗಾಳಿ
ಜೋರಾಯಿತು!



© KTBS NOT TO BE REPUBLISHED




ಸಮುದ್ರ ಮಟ್ಟದಿಂದ ನಾನು ಇನ್ನೂ ಮೇಲೇರುತ್ತಿದ್ದೇನೆ. ಪುಟಾಣಿ, ನಾನೀಗ ಇರುವ ಸ್ಥಳಕ್ಕೆ ಪ್ರಸ್ಥಭೂಮಿ ಎನ್ನುತ್ತಾರೆ. ಇದು ವಿಶಾಲವಾದ, ಸಮತಟ್ಟಾದ ಪ್ರದೇಶ. ಇದು ಸಮುದ್ರ ಮಟ್ಟದಿಂದ ಸ್ವಲ್ಪ ಎತ್ತರವಾಗಿದೆ.



ನಾನಿನ್ನೂ ಮೇಲೇರಿದ್ದೇನೆ. ಅಲ್ಲಿ ಕಾಣುತ್ತಿರುವುದೇ ಬೆಟ್ಟಗಳ ಸಾಲು. ಅದು ಸಮುದ್ರ ಮಟ್ಟದಿಂದ ಆರುನೂರು ಮೀಟರ್‌ಗಳಷ್ಟು ಎತ್ತರವಾಗಿದೆ. ಪುಟಾಣಿ, ಇಲ್ಲಿ ನೋಡು. ಈ ಬೆಟ್ಟದ ಇಳಿಜಾರಿನಿಂದ ನದಿ ಹರಿಯುತ್ತಿದೆ. ಸ್ವಲ್ಪ ಕೆಳಗೆ ನೋಡು. ನದಿ ಹರಿಯುತ್ತಾ ಕಣಿವೆ ಸೇರಿದೆ. ಎಷ್ಟು ಚಿಕ್ಕದಾಗಿ ಕಾಣುತ್ತಿದೆ!








ಎರಡು ಬೆಟ್ಟಗಳ ಮಧ್ಯೆ ಇರುವ ಕಿರಿದಾದ ಸ್ಥಳವೇ ಕಣಿವೆ. ಕೆಲವೊಮ್ಮೆ ಇಲ್ಲಿ ನದಿಗಳು ಹರಿಯುವುದನ್ನು ನೋಡಬಹುದು.




© KTBS NOT TO BE REPUBLISHED



@KTBS
NOT TO BE REPUBLISHED



ಬೆಟ್ಟಗಳು	ಪರ್ವತಗಳು



@KTBS NOT TO BE REPUBLISHED

ಮೋಡಣ್ಣನ ಪಯಣ ಓದಿರುವೆ ತಾನೆ? ಮೋಡಣ್ಣ ಹೇಳಿದ ಸಮುದ್ರ ತೀರಗಳು, ಮರುಭೂಮಿಗಳು, ಮೈದಾನಗಳು, ಪ್ರಸ್ಥಭೂಮಿಗಳು, ಪರ್ವತಗಳು, ಬೆಟ್ಟಗಳು ನಮ್ಮ ಭೂಮಿಯ ಮೇಲೆ ಕಂಡುಬರುವ ಸುಂದರ ಭೂಸ್ವರೂಪಗಳು. ಇವುಗಳಲ್ಲಿ ಕೆಲವು ನಿನ್ನ ಸುತ್ತಲೂ ಇರಬಹುದು. ಗುರುತಿಸು.

ಇವುಗಳಿಗೆ ಉತ್ತರಿಸು. (ಮೋಡಣ್ಣನ ಸಹಾಯ ತೆಗೆದುಕೋ)

1. ಬೆಟ್ಟಗಳು ಸಮುದ್ರ ಮಟ್ಟದಿಂದ ಎಷ್ಟು ಎತ್ತರದಲ್ಲಿ ಇರುತ್ತವೆ?

_____

2. ಬೆಟ್ಟಗಳ ಮಧ್ಯೆ ಕಂಡುಬರುವ ಆಳವಾದ ಪ್ರದೇಶವನ್ನು ಯಾವ ಹೆಸರಿನಿಂದ ಕರೆಯುತ್ತಾರೆ?

_____

3. ನಮ್ಮ ರಾಜ್ಯದ ಮೂರು ಪ್ರಸಿದ್ಧವಾದ ಜಲಪಾತಗಳನ್ನು ಹೆಸರಿಸು.
(ಶಿಕ್ಷಕರ/ಹಿರಿಯರ ನೆರವು ಪಡೆ)

_____

4. ಫಲವತ್ತಾದ ಮಣ್ಣು ಎಲ್ಲಿ ಕಂಡು ಬರುತ್ತದೆ?

_____

ನೀನು ತಿಳಿದುಕೊಂಡ ವಿವಿಧ ಭೂ ಸ್ವರೂಪಗಳಲ್ಲಿ ಮಾನವರು, ಪ್ರಾಣಿ, ಪಕ್ಷಿ, ಕೀಟಗಳು, ವಿವಿಧ ರೀತಿಯ ಸಸ್ಯಗಳು ಇವೆ. ಇವು ಭೂಮಿಯ ಮೇಲೆ ಬದುಕಲು ಗಾಳಿ, ನೀರು ಮತ್ತು ಮಣ್ಣು ಅತಿ ಮುಖ್ಯ.

ಗಾಳಿ

ಭೂಮಿಯ ಮೇಲಿನ ಜೀವಿಗಳು ಉಸಿರಾಡಲು ಗಾಳಿ ಬೇಕು ಎಂಬುದು ನಿನಗೆ ಗೊತ್ತು.



ಚಿತ್ರ ಗಮನಿಸು. ಕಾರ್ಖಾನೆಗಳು, ವಾಹನಗಳು ಹೊಗೆಯನ್ನು ಹೊರಬಿಡುತ್ತಿವೆ. ಈ ಹೊಗೆ ಗಾಳಿಯನ್ನು ಸೇರಿ ಅದನ್ನು ಮಲಿನಗೊಳಿಸುತ್ತದೆ. ಮಲಿನವಾದ ಗಾಳಿಯನ್ನು ಉಸಿರಾಡಿದಾಗ ರೋಗಗಳು ಬರುತ್ತವೆ.

ಗಾಳಿಯು ಮಲಿನವಾಗದಂತೆ ತಡೆಯುವುದು ಹೇಗೆ? ನಾಲ್ಕು ಸಾಲುಗಳಲ್ಲಿ ಬರೆ.
(ಶಿಕ್ಷಕರ/ಹಿರಿಯರ ನೆರವು ಪಡೆ)

_____

_____

_____

_____

@KTBS NOT TO BE REPUBLISHED

ನೀರು

ಜೀವಿಗಳಿಗೆ ನೀರು ಅತಿ ಅಗತ್ಯ. ನೀರು ಮತ್ತು ಅದರ ಮಹತ್ವದ ಬಗ್ಗೆ ನೀನು ಈಗಾಗಲೇ ತಿಳಿದಿರುವೆ.

ಚಿತ್ರ ವೀಕ್ಷಿಸು. ಕಾರ್ಖಾನೆಗಳ ಹೊಲಸು ನೀರು, ಚರಂಡಿಯ ನೀರು ನೀರಿನ ಆಕರಗಳಿಗೆ ಸೇರುತ್ತಿದೆ. ಕೆಲ ಜನರು ತಮ್ಮ ವಾಹನಗಳನ್ನು ನೀರಿನಲ್ಲಿಯೇ ತೊಳೆಯುತ್ತಿದ್ದಾರೆ. ಕೆಲವರು ಬಟ್ಟೆ ಒಗೆಯುತ್ತಿದ್ದಾರೆ. ಪಾತ್ರೆ ತೊಳೆಯುತ್ತಿದ್ದಾರೆ. ಇದರಿಂದ ನೀರು ಮಲಿನವಾಗುತ್ತದೆ. ಮಲಿನವಾದ ನೀರು ಬಳಸಲು ಯೋಗ್ಯವಲ್ಲ.



ನೀರು ಮಲಿನವಾಗದಂತೆ ನೀನು ತೆಗೆದುಕೊಳ್ಳುವ ಕ್ರಮಗಳನ್ನು ಇಲ್ಲಿ ಬರೆ.

_____

_____

_____

@KTBS NOT TO BE REPUBLISHED

ಮಣ್ಣು

ಜೀವಿಗಳ ಬದುಕಿಗೆ ಮಣ್ಣು ಅತಿ ಮುಖ್ಯ.ಸಸ್ಯಗಳು ಬೆಳೆಯಲು, ಮನೆ ಕಟ್ಟಲು, ಇಟ್ಟಿಗೆ ತಯಾರಿಸಲು ಇತ್ಯಾದಿ ಕೆಲಸಗಳಿಗೆ ಮಣ್ಣು ಬೇಕು.

ಪ್ಲಾಸ್ಟಿಕ್ ವಸ್ತುಗಳ ಹೆಚ್ಚಾದ ಬಳಕೆ, ಹೊಲಗಳಿಗೆ ಹೆಚ್ಚು ರಾಸಾಯನಿಕ ಗೊಬ್ಬರಗಳ ಬಳಕೆ ಇತ್ಯಾದಿ ಚಟುವಟಿಕೆಗಳಿಂದ ಇಂದು ಮಣ್ಣು ಮಲಿನವಾಗುತ್ತಿದೆ.

ಮಣ್ಣಿನ ಮಲಿನತೆಯನ್ನು ಹೇಗೆ ತಡೆಯುವೆ? ಎರಡು ವಾಕ್ಯ ಬರೆ.

_____

_____

ನಿನ್ನ ಸುತ್ತಲಿನ ಗಾಳಿ, ನೀರು ಮತ್ತು ಮಣ್ಣು ಮಲಿನವಾಗದಂತೆ ಎಚ್ಚರಿಕೆ ವಹಿಸು. ಇವುಗಳನ್ನು ಸಂರಕ್ಷಿಸುವ ಕ್ರಮಗಳನ್ನು ತಿಳಿದುಕೊ. ಈ ಕ್ರಮಗಳನ್ನು ಅನುಸರಿಸಿ ಈ ಅಮೂಲ್ಯ ಸಂಪನ್ಮೂಲಗಳನ್ನು ಕಾಪಾಡಿಕೊ. ಏಕೆಂದರೆ ಇವು ನಾವು ಮತ್ತು ಇತರ ಜೀವಿಗಳು ಬದುಕಲು ಬಹಳ ಅವಶ್ಯಕ.

ಹವಾಮಾನ ಮತ್ತು ವಾಯುಗುಣ

ಕೆಳಗಿನ ಚಿತ್ರಗಳನ್ನು ವೀಕ್ಷಿಸು. ಸರಿಯಾದ ವಾಕ್ಯವನ್ನು ಚಿತ್ರಗಳಿಗೆ ಹೊಂದಿಸು.

ಅ	ಬ
	ಗಾಳಿ ಬೀಸುತ್ತಿದೆ.
	ಬಿಸಿಲು ಪ್ರಖರವಾಗಿದೆ.
	ಮೋಡ ಕವಿದಿದೆ.
	ಮಳೆ ಬರುತ್ತಿದೆ.

@KTBS NOT TO BE REPUBLISHED

ಮೇಲಿನ ಚಿತ್ರದಲ್ಲಿನ ಸನ್ನಿವೇಶಗಳು ದಿನದ ಹವೆಯಲ್ಲಾಗುವ ಬದಲಾವಣೆಗಳನ್ನು ಸೂಚಿಸುತ್ತವೆ. ಇದಕ್ಕೆ ಹವಾಮಾನ ಎಂದು ಕರೆಯುತ್ತಾರೆ. ಇದರ ಬಗ್ಗೆ ಹಿಂದಿನ ತರಗತಿಯಲ್ಲಿ ಕಲಿತ ಅಂಶಗಳನ್ನು ನೆನಪಿಸಿಕೊ.



ಓದಿ–ತಿಳಿ

ಒಂದೇ ದಿನದಲ್ಲಿ ಅಥವಾ ದಿನದಿಂದ ದಿನಕ್ಕೆ ಹವಾಮಾನ ಬದಲಾಗುತ್ತಿರುತ್ತದೆ. ಒಂದು ಪ್ರದೇಶದ ಹವಾಮಾನವನ್ನು ಸುಮಾರು ಮೂವತ್ತರಿಂದ ಮೂವತ್ತೈದು ವರ್ಷಗಳವರೆಗೆ ಪರಿಶೀಲಿಸುತ್ತಾರೆ. ಈ ದೀರ್ಘಕಾಲಿಕ ಹವಾಮಾನದ ಸರಾಸರಿಯೇ **ವಾಯುಗುಣ**.

ವಾಯುಗುಣಕ್ಕೂ, ಜನಜೀವನಕ್ಕೂ ಸಂಬಂಧವಿದೆ. ಜನರ ಉಡುಗೆ, ತೊಡುಗೆ, ಮನೆ ಕಟ್ಟುವ ರೀತಿ, ಕೈಗಾರಿಕೆ, ಬೆಳೆಯುವ ಬೆಳೆಗಳು ಎಲ್ಲವೂ ಆಯಾ ಪ್ರದೇಶದ ವಾಯುಗುಣವನ್ನು ಅವಲಂಬಿಸಿವೆ. ಉದಾಹರಣೆಗೆ, ಅತಿ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಇಳಿಜಾರು ಮಾಡಿನ ಮನೆಗಳು ಕಂಡುಬರುತ್ತವೆ. ಅತೀ ಬಿಸಿಲಿರುವ ಹಾಗೂ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಜೋಳ, ರಾಗಿಯಂತಹ ಬೆಳೆಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ.

ಹವಾಮಾನ ಮತ್ತು ವಾಯುಗುಣ ಇವುಗಳ ನಡುವಿನ ವ್ಯತ್ಯಾಸವನ್ನು ಇಲ್ಲಿ ಬರೆ.

ಹವಾಮಾನ	ವಾಯುಗುಣ

@KTBS NOT TO BE REPUBLISHED

ಏಪ್ರಿಲ್–ಮೇ ತಿಂಗಳಲ್ಲಿ ನಿನ್ನ ಶಾಲೆಗೆ ಬೇಸಿಗೆ ರಜೆ ಇರುತ್ತದೆ. ಆ ದಿನಗಳಲ್ಲಿ ನಿನ್ನೂರಿನ ಹವಾಮಾನ ಹೇಗಿರುತ್ತದೆ? ಬೇಸಿಗೆ ರಜೆ ನಂತರ ನಿನ್ನ ಶಾಲೆ ಮತ್ತೆ ಪ್ರಾರಂಭವಾದಾಗ ಹವಾಮಾನ ಹೇಗಿರುತ್ತದೆ? ಹವಾಮಾನದ ಬದಲಾವಣೆಯಿಂದ ಕಾಲಗಳು ಅಥವಾ ಋತುಗಳು ಉಂಟಾಗುತ್ತವೆ. ಮೂರು ಕಾಲಗಳನ್ನು ಸಾಮಾನ್ಯವಾಗಿ ಗುರುತಿಸಬಹುದು.

1) ಬೇಸಿಗೆ ಕಾಲ

2) ಮಳೆಗಾಲ

3) ಚಳಿಗಾಲ

ಇಲ್ಲಿ ಕೆಲವು ಸನ್ನಿವೇಶಗಳನ್ನು ಕೊಟ್ಟಿದೆ. ಅವು ಯಾವ ಕಾಲಕ್ಕೆ ಸಂಬಂಧಿಸಿವೆ ಎಂಬುದನ್ನು ಬರೆ.

ಕ್ರ.ಸಂ.	ಸನ್ನಿವೇಶ	ಸಂಬಂಧಿಸಿದ ಕಾಲ
1.	ತಣ್ಣೀರಿನಲ್ಲಿ ಸ್ನಾನ ಮಾಡುವುದು.	
2.	ಉಣ್ಣೆ ಉಡುಪುಗಳನ್ನು ಧರಿಸಿ ಬೆಚ್ಚನೆ ಅನುಭವ ಪಡೆಯುವುದು.	
3.	ಫ್ಯಾನ್ ಗಾಳಿಗೆ ಕುಳಿತುಕೊಳ್ಳಲು ಬಯಸುವುದು.	
4.	ರೇನ್‌ಕೋಟ್ ಧರಿಸಿ ಓಡಾಡುವುದು.	
5.	ಮರಗಳು ಎಲೆಗಳನ್ನು ಉದುರಿಸುವುದು.	
6.	ಛತ್ರಿಯನ್ನು ಬಳಸುವುದು.	

ಬೇಸಿಗೆ ಕಾಲದಲ್ಲಿ ಬಿಸಿಲು ಹೆಚ್ಚು. ನೀನು ಧರಿಸುವ ಬಟ್ಟೆಯಲ್ಲಿ, ಸೇವಿಸುವ ಆಹಾರದಲ್ಲಿ ಬದಲಾವಣೆ ಇರುತ್ತದೆ. ಗಮನಿಸು.

ಬೇಸಿಗೆ ಕಾಲದಲ್ಲಿ ನೀನು ಎಂತಹ ಆಹಾರ ಸೇವಿಸುವೆ? ಇಲ್ಲಿ ಬರೆ.

_____

_____

ಬೇಸಿಗೆ ಕಾಲದಲ್ಲಿ ಎಂತಹ ಬಟ್ಟೆಗಳನ್ನು ಧರಿಸುವೆ?

_____

_____

©KTBS NOT TO BE REPUBLISHED



ಮಳೆಗಾಲದಲ್ಲಿ ಎಲ್ಲೆಲ್ಲೂ ನೀರು. ಜನರು ಛತ್ರಿಗಳನ್ನು ಹಿಡಿದು ಓಡಾಡುತ್ತಾರೆ. ಮಳೆಗಾಲದ ವಾತಾವರಣವನ್ನು ಗಮನಿಸು. ಆಗಸದಲ್ಲಿ ಆಗಾಗ ಹೊಳೆಯುವ ಮಿಂಚನ್ನು ನೀನು ನೋಡಿರುವೆ. ಮಿಂಚು ಕಂಡು ಬಂದ ಕೆಲವು ಕ್ಷಣಗಳಲ್ಲಿ ಗುಡುಗಿನ ಶಬ್ದ ಕೇಳುತ್ತದೆ. ಏಕೆ ಎಂಬುದನ್ನು ನಿನ್ನ ಶಿಕ್ಷಕರಿಂದ ಕೇಳಿ ತಿಳಿದುಕೊ.

ಈ ಚಿತ್ರವನ್ನು ಗಮನಿಸು. ಇದರ ಹೆಸರನ್ನು ಇಲ್ಲಿ ಬರೆ.



ಕಾಮನಬಿಲ್ಲು ಯಾವಾಗ ಕಾಣಿಸುತ್ತದೆ?

_____

ಕಾಮನಬಿಲ್ಲಿನಲ್ಲಿ ಎಷ್ಟು ಬಣ್ಣಗಳನ್ನು ಗುರುತಿಸಬಲ್ಲೆ? ಅವುಗಳ ಹೆಸರನ್ನು ಇಲ್ಲಿ ಬರೆ.

_____

_____

_____

ಚಳಿ ಹೆಚ್ಚಾಗಿರುವ ಕಾಲವೇ ಚಳಿಗಾಲ. ಈ ಕಾಲದಲ್ಲಿ ಜನರು ಬೆಚ್ಚಗಿನ ಬಟ್ಟೆಗಳನ್ನು ಧರಿಸುತ್ತಾರೆ. ಮರಗಳು ಚಳಿಗಾಲದಲ್ಲಿ ಎಲೆಗಳನ್ನು ಉದುರಿಸುತ್ತವೆ.

ಚಳಿಗಾಲದಲ್ಲಿ ಸೇವಿಸುವ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡು.

_____

_____

_____

_____

@KTBS NOT TO BE REPUBLISHED

ಬೇಸಿಗೆ ಕಾಲ, ಮಳೆಗಾಲ ಹಾಗೂ ಚಳಿಗಾಲಗಳು ಜನಜೀವನದಲ್ಲಿ ಬದಲಾವಣೆ ತರುತ್ತವೆ. ಉಡುಗೆ–ತೊಡುಗೆ, ಬೆಳೆಗಳು ಹಾಗೂ ಆಹಾರ ಸೇವನೆಯ ಮೇಲೆ ಪ್ರಭಾವ ಬೀರುತ್ತವೆ ಎಂಬುದನ್ನು ತಿಳಿ.

ನಿನಗಿದು ಗೊತ್ತೆ?

- ಹಿಮಾಲಯ ಪರ್ವತ ಶ್ರೇಣಿ 2400 km ಉದ್ದವಾಗಿದೆ. ಇದು ಹಿಮದಿಂದ ಆವರಿಸಿದೆ.
- ಕಣಿವೆಗಳು **V** ಅಥವಾ **U** ಆಕಾರದಲ್ಲಿರುತ್ತವೆ.
- ಐಬೆಎ ಪ್ರಸ್ಥಭೂಮಿಯನ್ನು ಪ್ರಪಂಚದ ಮೇಲ್ಛಾವಣಿ ಎನ್ನುತ್ತಾರೆ.
- ನದಿಗಳು ಹರಿದು ತರುವ ಮಣ್ಣನ್ನು ಮೆಕ್ಕಲು ಮಣ್ಣು ಎನ್ನುವರು.
- ಭಾರತದ ಪಶ್ಚಿಮಕ್ಕೆ **ಥಾರ್** ಮರುಭೂಮಿಯಿದೆ.
- ಮುಳ್ಳಯ್ಯನ ಗಿರಿ, ಕರ್ನಾಟಕದ ಅತಿ ಎತ್ತರದ ಶಿಖರ. ಇದು ಸಮುದ್ರ ಮಟ್ಟದಿಂದ ಸುಮಾರು 1925 m ಎತ್ತರದಲ್ಲಿದೆ.
- ಮಲಿನವಾದ ಗಾಳಿಯ ಸೇವನೆಯಿಂದ ಕ್ಷಯ, ಉಬ್ಬಸದಂತಹ ರೋಗಗಳು ಬರುತ್ತವೆ.
- ಭಾರತಕ್ಕೆ ಮುಂಗಾರು ಮಳೆ ಮಾರುತಗಳು ಮತ್ತು ಹಿಂಗಾರು ಮಳೆ ಮಾರುತಗಳು ಮಳೆ ತರುತ್ತವೆ.
- ಭೂಮಿಯ ನೆಲಭಾಗದ ಅರ್ಧಕ್ಕಿಂತ ಹೆಚ್ಚು ಭಾಗ ಮೈದಾನ ಪ್ರದೇಶವೇ ಆಗಿದೆ.
- ಕಾಶ್ಮೀರವು ಉತ್ತರ ಭಾರತದ ಒಂದು ಕಣಿವೆ ಪ್ರದೇಶ.
- ಕಾಮನ ಬಿಲ್ಲಿನಲ್ಲಿ ಏಳು ಬಣ್ಣಗಳಿವೆ. ಆದರೆ ಈ ಏಳು ಬಣ್ಣಗಳು ಸ್ಪಷ್ಟವಾಗಿ ಕಾಣುವುದಿಲ್ಲ.
- ಕಾಮನ ಬಿಲ್ಲಿನ ಬಣ್ಣಗಳನ್ನು ನೆನಪಿಡಲು ಬಳಸುವ ಆಂಗ್ಲ ಭಾಷೆಯ ಪದವೇ VIBGYOR. ಈ ಅಕ್ಷರಗಳು ಬಣ್ಣಗಳ ಮೊದಲನೆ ಅಕ್ಷರವನ್ನು ಸೂಚಿಸುತ್ತವೆ.

V	-	Violet	–	ನೇರಳೆ
I	-	Indigo	–	ಬೂದು
B	-	Blue	–	ನೀಲಿ
G	-	Green	–	ಹಸಿರು
Y	-	Yellow	–	ಹಳದಿ
O	-	Orange	-	ಕಿತ್ತಳೆ
R	-	Red	-	ಕೆಂಪು

NOT TO BE REPUBLISHED @KTBS

ಪಾಠ – 25


ನಮ್ಮ ರಾಜ್ಯ–ನಮ್ಮ ಹೆಮ್ಮೆ

H1C4D1

ಈ ಪಾಠವನ್ನು ಕಲಿತ ನಂತರ ನೀನು,

- ಭಾರತದ ನಕ್ಷೆಯಲ್ಲಿ ಕರ್ನಾಟಕವನ್ನು ಗುರುತಿಸುವೆ ಮತ್ತು ಕರ್ನಾಟಕ ರಾಜ್ಯದ ಸ್ವಾಭಾವಿಕ ವಿಭಾಗಗಳ ಪರಿಚಯ ಮಾಡಿಕೊಳ್ಳುವೆ.
- ನಮ್ಮ ರಾಜ್ಯದ ಪ್ರಸಿದ್ಧ ಐತಿಹಾಸಿಕ ಸ್ಥಳಗಳು ಮತ್ತು ನಿಸರ್ಗಧಾಮಗಳನ್ನು ಗುರುತಿಸುವೆ. ಅವುಗಳ ಮಹತ್ವ ತಿಳಿದು ಸಂರಕ್ಷಿಸುವ ಮನೋಭಾವ ಬೆಳೆಸಿಕೊಳ್ಳುವೆ.

ಹಲವು ಜಿಲ್ಲೆಗಳು ಸೇರಿ ಒಂದು ರಾಜ್ಯವಾಗುತ್ತದೆ ಎಂದು ನಿನಗೆ ತಿಳಿದಿದೆ. ಇಂತಹ ಹಲವು ರಾಜ್ಯಗಳು ಒಟ್ಟಿಗೆ ಸೇರಿರುವ ಭೂಪ್ರದೇಶವೇ ದೇಶ. ಭಾರತ ನಮ್ಮ ದೇಶ. ಕೆಳಗಿನ ನಕ್ಷೆಯನ್ನು ಗಮನಿಸು. ಇದು ನಮ್ಮ ಭಾರತ ದೇಶದ ನಕ್ಷೆ.



© KTBS NOT TO BE REPUBLISHED

ಭಾರತದಲ್ಲಿರುವ ರಾಜ್ಯಗಳ ಹೆಸರನ್ನು ಇಲ್ಲಿ ಬರೆ. ನಕ್ಷೆಯ ನೆರವು ಪಡೆ.

ಕ್ರ. ಸಂ.	ರಾಜ್ಯಗಳ ಹೆಸರು

@KTBS
NOT TO BE REPUBLISHED


- ಭಾರತದಲ್ಲಿರುವ ಒಟ್ಟು ರಾಜ್ಯಗಳ ಸಂಖ್ಯೆ _____
- ಭಾರತದ ನಕ್ಷೆಯಲ್ಲಿ ಕರ್ನಾಟಕವಿರುವ ದಿಕ್ಕು _____

ಕರ್ನಾಟಕ ನಮ್ಮ ರಾಜ್ಯ. ಇಲ್ಲಿ ಮೂವತ್ತೊಂದು ಜಿಲ್ಲೆಗಳಿವೆ ಎಂಬುದನ್ನು ನೀನಾಗಲೆ ತಿಳಿದಿರುವೆ. ಹಿಂದಿನ ತರಗತಿಯಲ್ಲಿ ನಿನ್ನ ಜಿಲ್ಲೆ ಹಾಗೂ ಸುತ್ತಲಿನ ಜಿಲ್ಲೆಗಳ ಕಿರುಪರಿಚಯ ಮಾಡಿಕೊಂಡಿರುವೆ.

ರಮೇಶನು ಕರ್ನಾಟಕದ ನೆರೆಯ ರಾಜ್ಯಗಳು ಹಾಗೂ ಅವುಗಳಿರುವ ದಿಕ್ಕುಗಳನ್ನು ಬರೆದಿದ್ದಾನೆ. ನಕ್ಷೆಯನ್ನು ಗಮನಿಸು. ತಪ್ಪಿದ್ದರೆ ಸರಿಯಾದ ಉತ್ತರವನ್ನು ಬರೆ.

ಪೂರ್ವ	–	ಮಹಾರಾಷ್ಟ್ರ	: _____
ಪಶ್ಚಿಮ	–	ಆಂಧ್ರ ಪ್ರದೇಶ ಮತ್ತು ತೆಲಂಗಾಣ	: _____
ದಕ್ಷಿಣ	–	ಕೇರಳ ಮತ್ತು ತಮಿಳುನಾಡು	: _____
ಉತ್ತರ	–	ಗೋವ	: _____

ಪ್ರತಿಯೊಂದು ರಾಜ್ಯದಲ್ಲಿಯೂ ವಿಶೇಷ ಭೂಲಕ್ಷಣಗಳಿವೆ. ಉದಾಹರಣೆಗೆ ಬೆಟ್ಟ, ಕರಾವಳಿ. ವಿವಿಧ ಭೂಸ್ವರೂಪಗಳ ಬಗ್ಗೆ ನೀನೀಗಾಗಲೆ ತಿಳಿದಿರುವೆ. ಭೂಸ್ವರೂಪ ಹಾಗೂ ವಾಯುಗುಣದ ಆಧಾರದ ಮೇಲೆ ನಮ್ಮ ರಾಜ್ಯದಲ್ಲಿ ನಾಲ್ಕು ಮುಖ್ಯ ಸ್ವಾಭಾವಿಕ ವಿಭಾಗಗಳನ್ನು ಗುರುತಿಸಲಾಗಿದೆ.



© KTBS NOT TO BE REPUBLISHED

ಸ್ವಾಭಾವಿಕ ಅಥವಾ ನೈಸರ್ಗಿಕ ವಿಭಾಗಗಳಲ್ಲಿ ಬರುವ ಜಿಲ್ಲೆಗಳ ಹೆಸರನ್ನು ಕೆಳಗೆ ಬರೆ.

1. ಪಶ್ಚಿಮ ತೀರಪ್ರದೇಶದ ಜಿಲ್ಲೆಗಳು :

_____

2. ಮಲೆನಾಡು ಪ್ರದೇಶದ ಜಿಲ್ಲೆಗಳು :

_____


3. ಉತ್ತರ ಮೈದಾನ ಪ್ರದೇಶದ ಜಿಲ್ಲೆಗಳು :

_____

4. ದಕ್ಷಿಣ ಮೈದಾನ ಪ್ರದೇಶದ ಜಿಲ್ಲೆಗಳು :

_____

ಚಿತ್ರವನ್ನು ಗಮನಿಸು. ಪಶ್ಚಿಮದ ತೀರಪ್ರದೇಶದ ಬಗ್ಗೆ ತಿಳಿ.



© KTBS NOT TO BE REPUBLISHED

ಉತ್ತರಿಸು.

ಪಶ್ಚಿಮ ತೀರಪ್ರದೇಶಕ್ಕಿರುವ ಇನ್ನೊಂದು ಹೆಸರೇನು?

_____


ಪಶ್ಚಿಮ ತೀರಪ್ರದೇಶದ ಜನರ ಪ್ರಮುಖ ಕಸುಬು ಯಾವುದು?

_____

ಹೊಂದಿಸು.

ಅ	ಬ
ಕಾಡುಕೋಳಿ	ಮುಖ್ಯ ನಗರ
ಶಾರ್ಕ್	ಖನಿಜ
ಅಡಿಕೆ	ಪಕ್ಷಿ
ಕಬ್ಬಿಣ	ಬೆಳೆ
ಕಾರವಾರ	ಸಮುದ್ರಜೀವಿ

ಮಲೆನಾಡು ಪ್ರದೇಶದ ಬಗ್ಗೆ ಈ ಚಿತ್ರದಲ್ಲಿ ಕೊಟ್ಟಿದೆ. ಗಮನಿಸು.




ಮಲೆನಾಡು ಪ್ರದೇಶದ ಬಗ್ಗೆ ತಿಳಿದೆಯಲ್ಲವೆ. ಇವುಗಳನ್ನು ಹೊಂದಿಸು.

ಅ	ಬ
ಸಹ್ಯಾದ್ರಿ	ಅಪರೂಪದ ಪ್ರಾಣಿ
ಮ್ಯಾಂಗನೀಸ್	ರಾಜ್ಯ ವೃಕ್ಷ
ಶ್ರೀಗಂಧ	ಖನಿಜ
ಕಾಡುಪಾಪ	ಬೆಟ್ಟಗಳ ಸಾಲು

ಮಲೆನಾಡು ಪ್ರದೇಶಕ್ಕೆ ಸಂಬಂಧಿಸಿದಂತೆ ಕೆಳಗಿನವುಗಳನ್ನು ಪಟ್ಟಿ ಮಾಡು.

ಪ್ರಮುಖ ಮರಗಳು	ಬೆಳೆಗಳು	ಮುಖ್ಯ ನಗರಗಳು

ನಮ್ಮ ರಾಜ್ಯದ ಮತ್ತೊಂದು ನೈಸರ್ಗಿಕ ವಿಭಾಗವೇ ಉತ್ತರದ ಮೈದಾನ ಪ್ರದೇಶ. ಕೆಳಗಿನ ಚಿತ್ರದಲ್ಲಿ ಅದರ ಬಗ್ಗೆ ಕೊಟ್ಟಿದೆ ಗಮನಿಸು.



© KTBS NOT TO BE REPUBLISHED

ಉತ್ತರಿಸು.

ಉತ್ತರ ಮೈದಾನ ಪ್ರದೇಶದಲ್ಲಿ ಎಂತಹ ಕಾಡುಗಳು ಕಂಡುಬರುತ್ತವೆ?

_____


ಉತ್ತರ ಮೈದಾನ ಪ್ರದೇಶದ ಜನರ ಮುಖ್ಯ ಕಸುಬು ಯಾವುದು?

_____

ಉತ್ತರ ಮೈದಾನ ಪ್ರದೇಶಕ್ಕೆ ಸಂಬಂಧಿಸಿದಂತೆ ಈ ಕೆಳಗಿನವುಗಳನ್ನು ಪಟ್ಟಿಮಾಡು.

ಮುಖ್ಯ ಖನಿಜಗಳು	
ಮುಖ್ಯ ಪ್ರಾಣಿಗಳು	
ಮುಖ್ಯ ಬೆಳೆಗಳು	

ದಕ್ಷಿಣ ಮೈದಾನ ಪ್ರದೇಶವು ನಮ್ಮ ರಾಜ್ಯದ ನಾಲ್ಕನೇ ನೈಸರ್ಗಿಕ ವಿಭಾಗವಾಗಿದೆ. ಕೆಳಗಿನ ಚಿತ್ರವನ್ನು ಗಮನಿಸು.



© KSEEB PUBLISHED

ದಕ್ಷಿಣ ಮೈದಾನ ಪ್ರದೇಶಕ್ಕೆ ಸಂಬಂಧಿಸಿದ ಹೇಳಿಕೆಗಳಲ್ಲಿ ಯಾವುದು ತಪ್ಪು ಎಂದು ಗುರುತಿಸು. ತಪ್ಪಾಗಿರುವುದನ್ನು ಸರಿಪಡಿಸಿ ಬರೆ.

- ದಕ್ಷಿಣದ ಬಯಲು ಪ್ರದೇಶವು ಸಮತಟ್ಟಾಗಿದೆ. _____
- ಇಲ್ಲಿನ ಪ್ರಮುಖ ಪ್ರಾಣಿ ತೋಳ. _____
- ಮೀನುಗಾರಿಕೆ ಇಲ್ಲಿಯ ಜನರ ಮುಖ್ಯ ಕಸುಬು._____
- ಅಭ್ರಕ ಈ ಪ್ರದೇಶದಲ್ಲಿ ದೊರೆಯುವ ಒಂದು ಮುಖ್ಯ ಖನಿಜ._____

ಮಾಡಿ–ನೋಡು

ದಕ್ಷಿಣದ ಮೈದಾನ ಪ್ರದೇಶದಲ್ಲಿ ಕಂಡು ಬರುವ ಪ್ರಮುಖ ಮರಗಳು ಹಾಗೂ ವನ್ಯ ಪ್ರಾಣಿಗಳ ಚಿತ್ರ ಸಂಗ್ರಹಿಸಿ ಚಿತ್ರ ಕೋಶ ತಯಾರಿಸು.

ನದಿಗಳು

ನಮ್ಮ ರಾಜ್ಯದಲ್ಲಿ ಹಲವು ನದಿಗಳಿವೆ. ಅವುಗಳಲ್ಲಿ ಕೆಲವು ಪಶ್ಚಿಮಾಭಿಮುಖವಾಗಿ, ಇನ್ನು ಕೆಲವು ಪೂರ್ವಾಭಿಮುಖವಾಗಿಯೂ ಹರಿಯುತ್ತವೆ. ಈ ಕೆಳಗೆ ನಮ್ಮ ರಾಜ್ಯದಲ್ಲಿ ಹರಿಯುವ ನದಿಗಳ ಪಟ್ಟಿ ನೀಡಿದೆ. ಶಿಕ್ಷಕರ ನೆರವಿನಿಂದ ಅವುಗಳನ್ನು ಪಶ್ಚಿಮಾಭಿಮುಖ ಮತ್ತು ಪೂರ್ವಾಭಿಮುಖ ನದಿಗಳಾಗಿ ವಿಂಗಡಿಸು.

ಕೃಷ್ಣಾ, ಘಟಪ್ರಭಾ, ಶರಾವತಿ, ಕಾಳಿ, ಮಲಪ್ರಭಾ, ಭೀಮಾ, ಅಘನಾಶಿನಿ, ತುಂಗಭದ್ರಾ, ಕಾವೇರಿ, ನೇತ್ರಾವತಿ, ಹೇಮಾವತಿ, ಕಪಿಲಾ.

ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು	ಪೂರ್ವಾಭಿಮುಖವಾಗಿ ಹರಿಯುವ ನದಿಗಳು

ಶಿಕ್ಷಕರ/ಹಿರಿಯರ ನೆರವಿನಿಂದ ಇವುಗಳನ್ನು ತಿಳಿದುಕೊ.

– ಕರ್ನಾಟಕದ ಜೀವನದಿ _____

– ಕರ್ನಾಟಕದ ಅತ್ಯಂತ ಉದ್ದವಾದ ನದಿ _____

© KTBS NOT TO BE REPUBLISHED

ಪ್ರೇಕ್ಷಣೀಯ ಸ್ಥಳಗಳು

ನಮ್ಮ ರಾಜ್ಯದಲ್ಲಿ ಹಲವು ಪ್ರೇಕ್ಷಣೀಯ ಸ್ಥಳಗಳಿವೆ. ಇದರಿಂದ ಪ್ರವಾಸಿಗರು ರಾಜ್ಯಕ್ಕೆ ಪ್ರತಿ ವರ್ಷವೂ ಬರುತ್ತಾರೆ. ನಮ್ಮ ರಾಜ್ಯದ ಕೆಲವು ಪ್ರಮುಖ ನಗರಗಳು, ಐತಿಹಾಸಿಕ ಸ್ಥಳಗಳು ಮತ್ತು ನಿಸರ್ಗಧಾಮಗಳ ಬಗ್ಗೆ ವಿವರ ನೀಡಿದೆ. ಗಮನಿಸು.

ಬೆಂಗಳೂರು

ಬೆಂಗಳೂರು ನಮ್ಮ ರಾಜ್ಯದ ರಾಜಧಾನಿ. ವಿಧಾನಸೌಧ, ವಿಕಾಸಸೌಧ, ಹೈಕೋರ್ಟ್, ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ಸಂಗ್ರಹಾಲಯ, ವೆಂಕಟಪ್ಪ ಕಲಾ ಶಾಲೆ, ಟಿಪ್ಪುವಿನ ಬೇಸಿಗೆ ಅರಮನೆ, ಜವಾಹರಲಾಲ್ ನೆಹರೂ ತಾರಾಲಯ, ಲಾಲ್‌ಬಾಗ್ ಮತ್ತು ಕಬ್ಬನ್‌ಪಾರ್ಕ್ ಇಲ್ಲಿನ ಪ್ರಮುಖ ಆಕರ್ಷಣೆಗಳು.



ಮೈಸೂರು

ದೀಪಾಲಂಕಾರ ಮಾಡಿರುವ ಅರಮನೆ, ಚಾಮುಂಡಿ ಬೆಟ್ಟ, ಮೃಗಾಲಯ ಇವು ಮೈಸೂರಿನಲ್ಲಿ ನೋಡಬಹುದಾದ ಪ್ರಸಿದ್ಧ ಸ್ಥಳಗಳು. ಮೈಸೂರಿನ **ದಸರಾ ಉತ್ಸವ** ಜಗದ್ವಿಖ್ಯಾತ.



ನಿನ್ನ ಜಿಲ್ಲೆಯ ಪ್ರಮುಖ ನಗರವೊಂದರ ಬಗ್ಗೆ ನಾಲ್ಕು ಸಾಲುಗಳನ್ನು ಬರೆ.

_____

_____

_____

_____

ನಮ್ಮ ರಾಜ್ಯದ ಇತಿಹಾಸಕ್ಕೆ ಸಂಬಂಧಿಸಿದ ಮಹತ್ವವಾದ ಸ್ಥಳಗಳೇ ಐತಿಹಾಸಿಕ ಸ್ಥಳಗಳು.

ಹಂಪೆ

ಚಿತ್ರ ಗಮನಿಸು. ಇದು ನಮ್ಮ ರಾಜ್ಯದ ಪ್ರಸಿದ್ಧ ಐತಿಹಾಸಿಕ ಸ್ಥಳ ಹಂಪೆಯಲ್ಲಿರುವ ಕಲ್ಲಿನ ರಥ. ಹಂಪೆ ವಿಜಯನಗರ ಜಿಲ್ಲೆಯಲ್ಲಿದೆ. ಇದು ಹಿಂದೆ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಇಲ್ಲಿಯ ಶಿಲ್ಪಕಲೆ ವಿಶ್ವ ಪ್ರಸಿದ್ಧ. ವಿರೂಪಾಕ್ಷ ದೇವಾಲಯ, ಕಮಲ ಮಹಲ್, ಹಜಾರ ರಾಮಸ್ವಾಮಿ ದೇವಾಲಯ ಹೀಗೆ ಹಲವು ದೇವಾಲಯಗಳ ಕೆತ್ತನೆ ನೋಡಲು ಸುಂದರವಾಗಿದೆ.



NOT TO BE REPUBLISHED © KTBS

ಕೆಳಗಿನ ಪಟ್ಟಿಯಲ್ಲಿ ಐತಿಹಾಸಿಕ ಸ್ಥಳಗಳು ಹಾಗೂ ಅವುಗಳಿರುವ ಜಿಲ್ಲೆಗಳನ್ನು ನೀಡಿದೆ. ಇವುಗಳನ್ನು ಹೊಂದಿಸಿ ಬರೆ.

	ಅ	ಬ
1.	ಹಳೇಬೀಡು	ಬಾಗಲಕೋಟೆ
2.	ಬಾದಾಮಿ	ವಿಜಯಪುರ
3.	ಗೋಲಗುಂಬಜ್	ಹಾಸನ
4.	ಕಲ್ಲಿನಕೋಟೆ	ದಕ್ಷಿಣ ಕನ್ನಡ
5.	ಸುಲ್ತಾನ ಬತ್ತೇರಿ	ಚಿತ್ರದುರ್ಗ

ನಿನ್ನ ಊರಿನಲ್ಲಿ ಅಥವಾ ಜಿಲ್ಲೆಯಲ್ಲಿರುವ ಯಾವುದಾದರೂ ಐತಿಹಾಸಿಕ ಸ್ಥಳವೊಂದರ ಬಗ್ಗೆ ನಾಲ್ಕು ಸಾಲುಗಳನ್ನು ಬರೆ.


_____

_____

_____

_____

ನಮ್ಮ ರಾಜ್ಯದ ಕೆಲವು ಸ್ಥಳಗಳು ಪ್ರಕೃತಿ ಸೌಂದರ್ಯದಿಂದ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಇವೇ ನಿಸರ್ಗಧಾಮಗಳು.



NOT TO BE REPUBLISHED © KSEEBS

ನಂದಿಬೆಟ್ಟ, ಬಾಬಾಬುಡನ್ ಗಿರಿ (ಇನಾಮ್ ದತ್ತಾತ್ರೇಯ ಪೀಠ), ಮುಳ್ಳಯ್ಯನ ಗಿರಿ, ಕೆಮ್ಮಣ್ಣುಗುಂಡಿ, ಕುದುರೆಮುಖ, ಕೊಡಚಾದ್ರಿ ಇವು ಪ್ರಮುಖ ಗಿರಿಧಾಮಗಳು.



ಓದಿ–ತಿಳಿ

- ಗಿರಿಧಾಮಗಳ ತಂಪುಹವೆ ಹಾಗೂ ಸೌಂದರ್ಯಕ್ಕಾಗಿ ಜನರು ಇಲ್ಲಿಗೆ ಭೇಟಿ ನೀಡುತ್ತಾರೆ.
- ಉಳ್ಳಾಲ, ಮಂಗಳೂರು, ಮಲ್ಪೆ, ಕಾರವಾರದಲ್ಲಿ ಸುಂದರ ಕಡಲ ತೀರಗಳಿವೆ. ಶಿವಮೊಗ್ಗ ಜಿಲ್ಲೆಯ ಜೋಗ್ ಜಲಪಾತ, ಮಂಡ್ಯ ಜಿಲ್ಲೆಯ ಶಿವನಸಮುದ್ರ ಬೆಳಗಾವಿ ಜಿಲ್ಲೆಯ ಗೋಕಾಕ್ ಜಲಪಾತಗಳ ದೃಶ್ಯ ಮನೋಹರವಾಗಿದೆ.
- ಬಂಡೀಪುರ, ನಾಗರಹೊಳೆ ಅಭಯಾರಣ್ಯಗಳು, ರಂಗನತಿಟ್ಟು, ಕೊಕ್ಕರೆ ಬೆಳ್ಳೂರಿನ ಪಕ್ಷಿಧಾಮಗಳು, ಜನರ ಪ್ರಮುಖ ಆಕರ್ಷಣೆಗಳಾಗಿವೆ. ಬಳ್ಳಾರಿ ಜಿಲ್ಲೆಯ ದರೋಜಿ ಕರಡಿಧಾಮ ಪ್ರಸಿದ್ಧವಾಗಿದೆ.

ನಿನಗೆ ತಿಳಿದಿರುವ ನಮ್ಮ ರಾಜ್ಯದ ಪ್ರೇಕ್ಷಣೀಯ ಸ್ಥಳಗಳನ್ನು ಪಟ್ಟಿಯಲ್ಲಿರುವಂತೆ ವಿಂಗಡಿಸಿ ಬರೆ.

ಜಲಪಾತಗಳು	ಪಕ್ಷಿಧಾಮಗಳು	ಅಭಯಾರಣ್ಯಗಳು	ಕಡಲತೀರಗಳು

ಐತಿಹಾಸಿಕ ಸ್ಥಳಗಳು, ನಿಸರ್ಗಧಾಮಗಳು ನಮ್ಮ ರಾಜ್ಯದ ಹೆಮ್ಮೆಯ ಸಂಕೇತಗಳು. ಅವುಗಳನ್ನು ರಕ್ಷಿಸುವುದು ನಮ್ಮ ಜವಾಬ್ದಾರಿ. ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಗುರುತಿಸು.

ಕ್ರ.ಸಂ.	ಹೇಳಿಕೆಗಳು	ಸರಿ	ತಪ್ಪು
1.	ಐತಿಹಾಸಿಕ ಸ್ಮಾರಕಗಳ ಮೇಲೆ ಕಲ್ಲಿನಿಂದ ಕೆತ್ತಿ ಅಥವಾ ಬಣ್ಣಗಳಿಂದ ಹೆಸರು ಬರೆಯುವುದು.		
2.	ಪಕ್ಷಿಧಾಮಗಳಲ್ಲಿ ನಿಶ್ಯಬ್ದವಾಗಿರುವುದು.		
3.	ಐತಿಹಾಸಿಕ ಸ್ಥಳ, ನಿಸರ್ಗಧಾಮಗಳಿಗೆ ಬರುವ ಪ್ರವಾಸಿಗರಿಗೆ ತೊಂದರೆ ಕೊಡುವುದು.		
4.	ನಿಸರ್ಗಧಾಮದ ಪ್ರಾಣಿಗಳನ್ನು ಬೇಟೆಯಾಡುವುದು.		
5.	ಐತಿಹಾಸಿಕ ಸ್ಥಳಗಳ ಹತ್ತಿರ ಎಲ್ಲೆಂದರಲ್ಲಿ ಮಲ–ಮೂತ್ರ ವಿಸರ್ಜನೆ ಮಾಡುವುದು.		

@KTBS NOT TO BE REPUBLISHED

ಐತಿಹಾಸಿಕ ಸ್ಥಳಗಳು ಮತ್ತು ನಿಸರ್ಗಧಾಮಗಳನ್ನು ರಕ್ಷಿಸಲು ನೀನೇನು ಮಾಡುವೆ ಎಂಬುದನ್ನು ನಿನ್ನ ಗೆಳೆಯರೊಂದಿಗೆ ಚರ್ಚಿಸು.

ಮಾಡಿ–ನೋಡು

ಪತ್ರಿಕೆಗಳಲ್ಲಿ ಬರುವ ನಿಸರ್ಗಧಾಮಗಳ ಚಿತ್ರಗಳನ್ನು ಸಂಗ್ರಹಿಸಿ ಇಲ್ಲಿ ಅಂಟಿಸು.

@KTBS
NOT TO BE REPUBLISHED

ನಿನಗೆ ಇಷ್ಟವಾದ ಯಾವುದಾದರೂ ಪ್ರೇಕ್ಷಣೀಯ ಸ್ಥಳದ ಬಗ್ಗೆ ನಾಲ್ಕು ಸಾಲು ಬರೆ.

_____

_____

_____

_____

ನಮ್ಮ ರಾಜ್ಯವು ಹಲವು ವಿಶಿಷ್ಟತೆಗಳಿಂದ ಕೂಡಿದ್ದು, ನಮ್ಮ ದೇಶದ ಪ್ರಮುಖ ರಾಜ್ಯವಾಗಿ ಗುರುತಿಸಿಕೊಂಡಿದೆ. ಇಂತಹ ಸಂಪದ್ಭರಿತವಾದ ಮತ್ತು ಸುಂದರವಾದ ರಾಜ್ಯ ನನ್ನದು ಎಂಬ ಹೆಮ್ಮೆ ನಿನಗಿರಲಿ.

ನಿನಗಿದು ಗೊತ್ತೆ?

- 2014ರಲ್ಲಿ ಆಂಧ್ರಪ್ರದೇಶ ರಾಜ್ಯವನ್ನು **ಆಂಧ್ರ ಪ್ರದೇಶ** ಮತ್ತು **ತೆಲಂಗಾಣ** ಎಂಬ ಎರಡು ರಾಜ್ಯಗಳನ್ನಾಗಿ ವಿಭಜಿಸಲಾಗಿದೆ.
- 2019ರಲ್ಲಿ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು **ಜಮ್ಮು ಮತ್ತು ಕಾಶ್ಮೀರ** ಹಾಗೂ **ಲಡಾಖ್** ಎಂಬ ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಲಾಗಿದೆ.
- ಕಾವೇರಿ ನದಿಯು ಕೊಡಗು ಜಿಲ್ಲೆಯ ಬ್ರಹ್ಮಗಿರಿ ಬೆಟ್ಟದ ತಲಕಾವೇರಿಯಲ್ಲಿ ಹುಟ್ಟುತ್ತದೆ.
- ಬೆಂಗಳೂರು ಮಾಹಿತಿ ತಂತ್ರಜ್ಞಾನಕ್ಕೆ ಹೆಸರುವಾಸಿ. ಇದನ್ನು **ಸಿಲಿಕಾನ್ ಸಿಟಿ** ಎಂದೂ ಕರೆಯುತ್ತಾರೆ.
- ಏಷ್ಯಾ ಖಂಡದಲ್ಲೇ ಪ್ರಪ್ರಥಮವಾಗಿ 1902ರಲ್ಲಿ ಮಂಡ್ಯ ಜಿಲ್ಲೆಯ ಶಿವನಸಮುದ್ರದಲ್ಲಿ ಜಲ ವಿದ್ಯುತ್ ತಯಾರಿಕೆ ಪ್ರಾರಂಭವಾಯಿತು.
- ಭಾರತದಲ್ಲೇ ಅತಿ ಎತ್ತರವಾದ **ಜೋಗ ಜಲಪಾತ**ವು ಕರ್ನಾಟಕದ ಶಿವಮೊಗ್ಗ ಜಿಲ್ಲೆಯಲ್ಲಿದೆ.
- ಭಾರತದ ಪಶ್ಚಿಮದ ತೀರ ಪ್ರದೇಶಗಳಲ್ಲಿ ಕಂಡುಬರುವ **ನೇಂಬ್ ಮೇರಿಸ್** ಅಥವಾ **ತೋನ್ನೆಪಾರ್ ದ್ವೀಪ**ವು ಅಷ್ಟಭುಜಾಕೃತಿಯ ಸ್ತಂಭ ಮಾದರಿಯ ಶಿಲಾರಚನೆಗಳಿಂದ ಕೂಡಿದೆ.
- **ಹಂಪೆ** ಮತ್ತು **ಪಟ್ಟದಕಲ್ಲು** – ಇವು ವಿಶ್ವಪರಂಪರೆಯ ಪಟ್ಟಿಯಲ್ಲಿ ಸ್ಥಾನ ಪಡೆದ ಕರ್ನಾಟಕದ ಪ್ರಸಿದ್ಧ ಐತಿಹಾಸಿಕ ಸ್ಥಳಗಳು.

©KTBS NOT TO BE REPUBLISHED

